# ಮತದಾರರ ಪಟ್ಟಿ ಪರಿಷ್ಕರಣೆ ಅವಧಿ ಮತ್ತೊಂದು ತಿಂಗಳು ವಿಸ್ತರಿಸಿ

• ಉದಯವಾಹಿನಿ, ಬೆಂಗಳೂರು

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್ಐಆರ್) ಅಡಿಯಲ್ಲಿ ಮತಗಟ್ಟೆ ಅಧಿಕಾರಿಗಳು, ಮತದಾರರ ಮನೆಗೆ ಭೇಟಿ ನೀಡುವ ಅವಧಿಯನ್ನು ಇನ್ನೂ ಒಂದು ತಿಂಗಳು ವಿಸ್ತರಿಸಬೇಕು ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ರಮೇಶ್ ಬಾಬು ಅವರು ರಾಜ್ಯ ಮುಖ್ಯ ಚುನಾವಣಾಧಿಕಾರಿ ವಿ.ಅನ್ಬುಕುಮಾರ್ ಅವರನ್ನು ಒತ್ತಾಯಿಸಿದ್ದಾರೆ.ಎಸ್ಐಆರ್ ಭಾಗವಾಗಿ ಅನ್ಬುಕುಮಾರ್ ಅವರು ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಜೊತೆಗೆ ನಡೆಸಿದ ಸಭೆಯಲ್ಲಿ ರಮೇಶ್ ಬಾಬು ಅವರು ಈ ಕುರಿತು ಮನವಿ ಸಲ್ಲಿಸಿದ್ದಾರೆ. ಮತಗಟ್ಟೆ ಅಧಿಕಾರಿಗಳು (ಬಿಎಲ್ಒ) ಈವರೆಗೆ 1.11 ಕೋಟಿ ಮತದಾರರನ್ನು ಎಎಸ್‌ಡಿಡಿಒ ಎಂದು ವರ್ಗೀಕರಿಸಿದ್ದರು. ರೋಲ್‌ಬ್ಯಾಕ್‌ಗೆ ಅವಕಾಶ ನೀಡಿದ ನಂತರ 2 ಲಕ್ಷಕ್ಕೂ ಹೆಚ್ಚು ಮತದಾರರನ್ನು ಈ ವರ್ಗೀಕರಣದಿಂದ ಹೊರಗೆ ತೆಗೆಯಲಾಗಿದೆ. ಇನ್ನೂ 1.08 ಕೋಟಿ ಮತದಾರರ ವಿವರ ಪರಿಶೀಲಿಸಿ, ರೋಲ್‌ಬ್ಯಾಕ್ ಮಾಡಬೇಕಿದೆ ಎಂದು ಮನವಿಯಲ್ಲಿ ವಿವರಿಸಿದ್ದಾರೆ.

ದಿನಗೂಲಿ ಕಾರ್ಮಿಕರು, ವಲಸಿಗರು, ವಿದ್ಯಾರ್ಥಿಗಳು, ಹಿರಿಯ ನಾಗರಿಕರು ಮತ್ತು ಅಂಗವಿಕಲ ವ್ಯಕ್ತಿಗಳು ಸೇರಿದಂತೆ ಅನೇಕ ಮತದಾರರು ಬಿಎಲ್ಒ ಭೇಟಿಗಳ ಸಮಯದಲ್ಲಿ ಲಭ್ಯವಿಲ್ಲದಿರಬಹುದು. ಹೀಗಾಗಿ ಅವರನ್ನು ಹೊರಗಿಡಬಾರದು ಎಂದು ಪತ್ರದಲ್ಲಿ ತಿಳಿಸಲಾಗಿದೆ.ಬಿಎಲ್ಒಗಳ ಮನೆ ಮನೆ ಭೇಟಿ ಆಗಸ್ಟ್ 17ಕ್ಕೆ ಮುಗಿಯಲಿದೆ.

# ಎಚ್‌ಐವಿ ತಡೆಗೆ ಯುವಜನರ ಪಾತ್ರ ಮುಖ್ಯ : ಡಾ. ವಿಶ್ವನಾಥ

• ಉದಯವಾಹಿನಿ, ಬೆಂಗಳೂರು

ಯುವಜನರು ಎಚ್‌ಐವಿ/ಏಡ್ಸ್ ಕುರಿತು ಸರಿಯಾದ ಮಾಹಿತಿ ಪಡೆದು, ಸೋಂಕು ತಡೆಗಟ್ಟುವ ಕ್ರಮಗಳ ಬಗ್ಗೆ ಜಾಗೃತರಾಗಬೇಕು ಎಂದು ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿಯ ಜಂಟಿ ನಿರ್ದೇಶಕ ಡಾ. ವಿಶ್ವನಾಥ ಹೇಳಿದರು. ಮೂಡಲಪಾಳ್ಯದ ಜ್ಞಾನಸೌಧದಲ್ಲಿ ನಡೆದ ಅಂತರಾಷ್ಟ್ರೀಯ ಯುವ ದಿನಾಚರಣೆ2026 ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಎಚ್‌ಐವಿ ಕುರಿತು ಇರುವ ತಪ್ಪು ಕಲ್ಪನೆಗಳನ್ನು ನಿವಾರಿಸಿ, ಸೋಂಕಿತರನ್ನು ತಾರತಮ್ಯವಿಲ್ಲದೆ ಗೌರವದಿಂದ ಕಾಣಬೇಕು ಎಂದರು. ಲಯನ್ಸ್ ಇಂಟರ್‌ನ್ಯಾಷನಲ್ ಜಿಲ್ಲೆ317ಎರ ಜಿಲ್ಲಾಧ್ಯಕ್ಷ ಲಯನ್ ಎಸ್. ಮನೋಜ್ ಕುಮಾರ್


ಉದಯವಾಹಿನಿ ಚಿತ್ರ

ಪಿ.ಎಂ.ಜೆ.ಎಫ್. ಮಾತನಾಡಿ, ಯುವಜನರು ಆರೋಗ್ಯದ ಬಗ್ಗೆ ಕಾಳಜಿ ವಹಿಸಿ ಸಮಾಜದಲ್ಲಿ ಎಚ್‌ಐವಿ ಕುರಿತು ಜಾಗೃತಿ ಮೂಡಿಸಬೇಕು ಎಂದು ಹೇಳಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಜಿಲ್ಲಾ ಕಾರ್ಯಕ್ರಮಾಧಿಕಾರಿ ಹಾಗೂ ಪಶ್ಚಿಮ ನಗರ ಪಾಲಿಕೆಯ ಆರೋಗ್ಯ ಅಧಿಕಾರಿ ಡಾ. ಸುರೇಶ್ ಜಿ.ಕೆ. ಮಾತನಾಡಿ, ಎಚ್‌ಐವಿ ಜಾಗೃತಿಗಾಗಿ ರಸಪ್ರಶ್ನೆ, 5ಕೆ ಮ್ಯಾರಥಾನ್, ಕಾಲೇಜು ಜಾಗೃತಿ, ರೆಡ್ ರಿಬ್ಬನ್ ಕ್ಲಬ್, ಫ್ಲ್ಯಾಶ್ ಮಾಬ್ ಹಾಗೂ ಬೈಕ್ ರ್‍ಯಾಲಿ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಶ್ರೀ ಶಾನ್ ಸಿಹಿಮೊಗ್ಗೆ ವಿಶೇಷ ಉಪನ್ಯಾಸ ನೀಡಿದರು.

ಡಾ. ರಾಧಾಕೃಷ್ಣ ವಿ. ಶ್ರೀಮತಿ ಅಪೂರ್ವ, ಶ್ರೀಮತಿ ಸರೋಜಮ್ಮ, ಶ್ರೀ ಹನುಮಂತರಾಯ, ಶ್ರೀಮತಿ ಯಶೋಧ ಹಾಗೂ ಲಯನ್ ಮಂಜುನಾಥ್ ರೆಡ್ಡಿ ಉಪಸ್ಥಿತರಿದ್ದರು.

## ಮೊಬೈಲ್ ನೆಟ್ವರ್ಕ್-ಇಂಟರ್‌ನೆಟ್ ಸಮಸ್ಯೆ: ಪರಿಹಾರಕ್ಕೆ ಕೇಂದ್ರ ಸರ್ಕಾರಕ್ಕೆ ಮನವಿ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಪರಪ್ಪನ ಅಗ್ರಹಾರದಲ್ಲಿರುವ ಬೆಂಗಳೂರು ಕೇಂದ್ರ ಕಾರಾಗೃಹದ ಸುತ್ತಮುತ್ತಲಿನ ನಿವಾಸಿಗಳು ಎದುರಿಸುತ್ತಿರುವ ಮೊಬೈಲ್ ನೆಟ್ವರ್ಕ್ ಮತ್ತು ಇಂಟರ್‌ನೆಟ್ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವಂತೆ ಬೆಂಗಳೂರು ಗ್ರಾಮಾಂತರ ಸಂಸದ ಡಾ. ಸಿ.ಎನ್. ಮಂಜುನಾಥ್ ಅವರು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಈ ಕುರಿತು ಕೇಂದ್ರ ಸಚಿವ ಜ್ಯೋತಿರಾದಿತ್ಯ ಎಂ. ಸಿಂಧಿಯಾ ಅವರಿಗೆ ಪತ್ರ ಬರೆದಿರುವುದಾಗಿ ಸಂಸದ ಮಂಜುನಾಥ್ ಅವರು ಹೇಳಿದ್ದಾರೆ.
ಈ ಕುರಿತು 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ದೂರಸಂಪರ್ಕ ಇಲಾಖೆ ಕಾರ್ಯದರ್ಶಿ ಅಮಿತ್ ಅಗರ್‌ವಾಲ್ ಅವರನ್ನು ಭೇಟಿಯಾಗಿ ಸಮಸ್ಯೆಯ ಕುರಿತು ಗಮನ ಸೆಳೆದಿರುವುದಾಗಿ ತಿಳಿಸಿದ್ದಾರೆ.

ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಟವರ್-ಹಾರ್ಮೋನಿಯಸ್ ಕಾಲ್ ಬ್ಲಾಕಿಂಗ್ ವ್ಯವಸ್ಥೆ ಹಾಗೂ ವೈ-ಫೈ ಜಾಮರ್‌ಗಳನ್ನು ಅಳವಡಿಸಿದ ಬಳಿಕ ಜೈಲಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೊಬೈಲ್ ಸಂವಹನ ಮತ್ತು ಇಂಟರ್‌ನೆಟ್ ಸೇವೆಗಳಿಗೆ ತೀವ್ರ ಅಡಚಣೆ ಉಂಟಾಗಿದೆ.

ಇದರಿಂದ ಸ್ಥಳೀಯ ನಿವಾಸಿಗಳು ದೈನಂದಿನ ಜೀವನದಲ್ಲಿ ಸಾಕಷ್ಟು ತೊಂದರೆ ಎದುರಿಸುತ್ತಿದ್ದಾರೆ. ವೈದ್ಯಕೀಯ ತುರ್ತು ಸಂದರ್ಭಗಳಲ್ಲಿ, ಆನ್‌ಲೈನ್ ತರಗತಿಗಳಿಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಹಾಗೂ ಮನೆಯಿಂದಲೇ ಕೆಲಸ ಮಾಡುವ ಉದ್ಯೋಗಿಗಳಿಗೆ ಸಂಪರ್ಕ ವ್ಯತ್ಯಯ ದೊಡ್ಡ ಸಮಸ್ಯೆಯಾಗಿದೆ.
ಇಲೆಕ್ಟ್ರಾನಿಕ್ಸ್ ಸಿಟಿಯಂತಹ ಪ್ರಮುಖ ಕಾರ್ಪೊರೇಟ್ ಕೇಂದ್ರ ಸಮೀಪದಲ್ಲಿರುವುದರಿಂದ ಈ ಪ್ರದೇಶದ ನಿವಾಸಿಗಳು ಮತ್ತು ವೃತ್ತಿಪರರಿಗೆ ವಿಶ್ವಾಸಾರ್ಹ ಮೊಬೈಲ್ ಹಾಗೂ ಇಂಟರ್‌ನೆಟ್ ಸಂಪರ್ಕ ಇನ್ನಷ್ಟು ಅಗತ್ಯವಾಗಿದೆ ಎಂದು ಹೇಳಿದ್ದಾರೆ.

# ಮೃತ್ಯುಕೂಪವಾದ ಬೆಂಗಳೂರು ರಸ್ತೆಗಳು: ಇಬ್ಬರು ಪತ್ರಕರ್ತರಿಗೆ ಕಾಲು ಮುರಿತ..!

ಉದಯವಾಹಿನಿ ಚಿತ್ರ


• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ರಸ್ತೆಗಳಲ್ಲಿರುವ ಗುಂಡಿಗಳು ಹಾಗೂ ಸಮರ್ಪಕ ನಿರ್ವಹಣೆ ಇಲ್ಲದ ಪಾದಚಾರಿ ಮಾರ್ಗಗಳು ಎಷ್ಟು ಅಪಾಯಕಾರಿ ಎಂಬುದಕ್ಕೆ ಮತ್ತೊಂದು ಉದಾಹರಣೆ ಸಿಕ್ಕಿದೆ.

ರಾತ್ರಿ ಪಾಳಿಯ ಕೆಲಸ ಮುಗಿಸಿ ಮನೆಗೆ ತೆರಳುತ್ತಿದ್ದ ವೇಳೆ ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ನ ಇಬ್ಬರು ಪತ್ರಕರ್ತರು ರಸ್ತೆ ಗುಂಡಿಗಳಿಂದಾಗಿ ಗಾಯಗೊಂಡು ಕಾಲಿನ ಮೂಳೆ ಮುರಿತಕ್ಕೆ ಒಳಗಾಗಿದ್ದಾರೆ. ಫೀಚರ್ ಪತ್ರಕರ್ತೆ ಶ್ರುತಿ ಹೇಮಚಂದ್ರನ್ ಅವರು ಮಂಗಳವಾರ ರಾತ್ರಿ 10 ಗಂಟೆಯ ಬಳಿಕ ಕಾಡುಗೋಡಿ ಟ್ರೀ ಪಾರ್ಕ್ ಮೆಟ್ರೋ ನಿಲ್ದಾಣದ ಸಮೀಪದ ಎಂಐಎಂಎಸ್ ಗುಲ್ಮೊಹರ್ ರಸ್ತೆಯಲ್ಲಿ ರಸ್ತೆ ಗುಂಡಿಯಿಂದಾಗಿ ಎಡವಿ ಗಾಯಗೊಂಡಿದ್ದಾರೆ. ಪರಿಣಾಮ ಅವರ ಪಾದದ ಮೂಳೆಯಲ್ಲಿ ಸಣ್ಣ ಬಿರುಕು (ಹೇರ್‌ಲೈನ್ ಫ್ರ್ಯಾಕ್ಚರ್) ಉಂಟಾಗಿದೆ. ಈ ರಸ್ತೆಯಲ್ಲಿ ಬೀದಿ ದೀಪಗಳಿಲ್ಲದ ಕಾರಣ ಶ್ರುತಿ ಮೊಬೈಲ್‌ನ ಟಾರ್ಚ್ ಬೆಳಕಿನ ಸಹಾಯದಿಂದ ನಡೆದುಕೊಂಡು ಹೋಗುತ್ತಿದ್ದರು. ಈ ವೇಳೆ ಗುಂಡಿಗೆ ಕಾಲಿಟ್ಟ ಪರಿಣಾಮ ಕಾಲು ಉಳುಕಿದೆ. ವೈದ್ಯರು ಅವರಿಗೆ ಮೂರು ವಾರಗಳ ವಿಶ್ರಾಂತಿ ಸೂಚಿಸಿದ್ದಾರೆ. ಮೆಟ್ರೋ ನಿಲ್ದಾಣಕ್ಕೆ ತೆರಳುವ ರಸ್ತೆ ಕಳಪೆ ಸ್ಥಿತಿಯಲ್ಲಿದ್ದು, ಇದನ್ನು ಪಾದಚಾರಿಗಳು ಮಾತ್ರವಲ್ಲದೆ ದ್ವಿಚಕ್ರ ವಾಹನಗಳ ನಿಲುಗಡೆಗೂ ಹೆಚ್ಚಾಗಿ ಬಳಸುತ್ತಾರೆ ಎಂದು ಶ್ರುತಿ ತಿಳಿಸಿದ್ದಾರೆ.

ಇದಕ್ಕೂ ಒಂದು ವಾರ ಮುನ್ನ ಪತ್ರಕರ್ತ ಪ್ರಣವ್ ಶ್ರೀರಾಮ್ ಅವರು ಸಿಂಗಯ್ಯನಪಾಳ್ಯ ಮೆಟ್ರೋ ನಿಲ್ದಾಣದ ಸಮೀಪದ ಫೀನಿಕ್ಸ್ ಮಾರ್ಕೆಟ್‌ಸಿಟಿ ಮಾಲ್ ಬಳಿ ರಸ್ತೆ ಗುಂಡಿಯಿಂದಾಗಿ ಕಾಲಿನ ಮೂಳೆ ಮುರಿತಕ್ಕೊಳಗಾಗಿದ್ದಾರೆ. ಈ ಪ್ರದೇಶದ ಪಾದಚಾರಿ ಮಾರ್ಗಗಳು ಸಮತಟ್ಟಾಗಿಲ್ಲ. ಕೆಲವೆಡೆ ಪಾದಚಾರಿ ಮಾರ್ಗಗಳು ಎತ್ತರವಾಗಿದ್ದರೆ, ಇನ್ನು ಕೆಲವು ಕಡೆ ತಗ್ಗಾಗಿವೆ ಎಂದು ಅವರು ಹೇಳಿದ್ದಾರೆ.

# ಯುವತಿ ಸಾವು ಖಂಡಿಸಿ ಪ್ರತಿಭಟನೆ

• ಉದಯವಾಹಿನಿ, ಬೆಂಗಳೂರು

ಎಲೆಕ್ಟ್ರಾನಿಕ್ಸ್ ಸಿಟಿ ಹಂತ 2ರ ಸಮೀಪವಿರುವ ಅನಂತನಗರದಲ್ಲಿ ರಸ್ತೆಯ ದುಸ್ಥಿತಿಯಿಂದಾಗಿ ಯುವತಿಯೊಬ್ಬರು ಭೀಕರ ಅಪಘಾತದಲ್ಲಿ ಮೃತಪಟ್ಟ ಘಟನೆಯನ್ನು ಖಂಡಿಸಿ ಸ್ಥಳೀಯ ನಿವಾಸಿಗಳು ತೀವ್ರ ಆಕ್ರೋಶದೊಂದಿಗೆ ಪ್ರತಿಭಟನೆ ನಡೆಸಿದರು. ಕೇಂದ್ರ ಭವಿಷ್ಯ ನಿಧಿ ಸಂಸ್ಥೆಯ ಉದ್ಯೋಗಿಯಾಗಿದ್ದ ಮೇಧಾ ಆಕರ್ಷ್ ಎಂಬುವರು ತಮ್ಮ ಸಹೋದ್ಯೋಗಿಯೊಂದಿಗೆ ದ್ವಿಚಕ್ರ ವಾಹನದಲ್ಲಿ ಕಚೇರಿಗೆ ತೆರಳುತ್ತಿದ್ದಾಗ, ಅನಂತನಗರದ ಕಳಪೆ ಹಾಗೂ ಗುಂಡಿ ಬಿದ್ದ ರಸ್ತೆಯಲ್ಲಿ ಆಯತಪ್ಪಿ ಬಿದ್ದು ಪ್ರಾಣ ಕಳೆದುಕೊಂಡಿದ್ದರು. ಈ ದುರಂತದಿಂದ ಕಂಗೆಟ್ಟ ನೂರಾರು ನಿವಾಸಿಗಳು ಮತ್ತು 'ಆನೇಕಲ್ ತಾಲ್ಲೂಕು ಜವಾಬ್ದಾರಿ ನಾಗರಿಕ ವೇದಿಕೆ'ಯ ಸದಸ್ಯರು ಅನಂತನಗರದ ಬಾಬಾ ರಾಮದೇವ್ ಮೆಡಿಕಲ್ ಸಮೀಪ ಮೌನ ಮೇಣದಬತ್ತಿ ಮೆರವಣಿಗೆ ನಡೆಸಿ, ಮೃತರ ಕುಟುಂಬಕ್ಕೆ ನ್ಯಾಯ ಒದಗಿಸಬೇಕು ಮತ್ತು ರಸ್ತೆಗಳನ್ನು ತಕ್ಷಣವೇ ದುರಸ್ತಿಗೊಳಿಸಬೇಕು ಎಂದು ಆಗ್ರಹಿಸಿದರು. ರಸ್ತೆಗಳು ಅತ್ಯಂತ ಹಾಯಾಪೂರ್ಣ ಸ್ಥಿತಿಯಲ್ಲಿದ್ದು, ರಸ್ತೆಗಳನ್ನು ಅಗೆದು ಅರ್ಧಕ್ಕೆ ಬಿಡಲಾಗುತ್ತಿದೆ ಎಂದು ನಿವಾಸಿಗಳು ಆರೋಪಿಸಿದ್ದಾರೆ. ಚಂದಾಪುರ ಪುರಸಭೆ ಅಧಿಕಾರಿಗಳಿಗೆ ಹಾಗೂ ಸ್ಥಳೀಯ ಶಾಸಕರಿಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲವೆಂದು ಪ್ರತಿಭಟನಾಕಾರರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

## ಜಾತಿ ಪದ್ಧತಿ, ಅಸ್ಪೃಶ್ಯತೆ ವಿರುದ್ಧ ಜಾಗೃತಿ ಬೀದಿ ನಾಟಕ

• ಉದಯವಾಹಿನಿ, ವಿಜಯಪುರ

ಜಾತಿ ಪದ್ಧತಿ ಹಾಗೂ ಅಸ್ಪೃಶ್ಯತೆ ನಿವಾರಣೆಯ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ, ಹಾಗೂ ಸ್ಫೂರ್ತಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆ,ಇಟ್ಟಸಂದ್ರ ಸ್ಫೂರ್ತಿ ಕಲಾತಂಡ ಇವರ ಸಹಯೋಗದಲ್ಲಿ ಬೀದಿ ನಾಟಕದ ಮೂಲಕ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ವಿಜಯಪುರ ಪಟ್ಟಣದ ಬಸ್ ನಿಲ್ದಾಣದಲ್ಲಿ ನಡೆದ ಈ ಬೀದಿ ನಾಟಕದಲ್ಲಿ,ಕಲಾವಿದರು ಜಾತಿ ವ್ಯವಸ್ಥೆಯ ದುಷ್ಪರಿಣಾಮಗಳು,ಅಸ್ಪೃಶ್ಯತೆಯಿಂದ ಸಮಾಜದ ಮೇಲೆ ಆಗುವ ಕೆಟ್ಟ ಪರಿಣಾಮ ಮತ್ತು ಸಂವಿಧಾನ ನೀಡಿರುವ ಸಮಾನತೆಯ ಹಕ್ಕುಗಳ ಕುರಿತು ಪರಿಣಾಮಕಾರಿಯಾಗಿ ಅಭಿನಯದ ಮೂಲಕ ತಿಳಿಸಿಕೊಟ್ಟರು. ಸಮಾನತೆ, ಭ್ರಾತೃತ್ವ ಮತ್ತು ಮಾನವೀಯತೆ ಸಂದೇಶ ಸಾರುವ ನಾಟಕವನ್ನು ನೆರೆದಿದ್ದ ನೂರಾರು ಪ್ರಯಾಣಿಕರು, ಸ್ಥಳೀಯ ನಾಗರಿಕರು, ವಿದ್ಯಾರ್ಥಿಗಳು ಆಸಕ್ತಿಯಿಂದ ವೀಕ್ಷಿಸಿದರು.

# ಪ್ರಜ್ವಲ್ ರೇವಣ್ಣ ವಿಡಿಯೊ ಸ್ವಲ್ಪ ಹಳೆಯದು: ಪ್ರಿಯಾಂಕ್ ಖರ್ಗೆ

## ತನಿಖೆ ಇನ್ನೂ ನಡೆಯುತ್ತಿದೆ. ಅಧಿಕಾರಿ ಯಾರೇ ಆಗಿರಲಿ, ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು

• ಉದಯವಾಹಿನಿ, ಬೆಂಗಳೂರು

**1** ಅವರ ಮೇಲೆ ಕ್ರಮ ಆಗುತ್ತದೆ
**2** ಯಾರನ್ನೂ ರಕ್ಷಣೆ ಮಾಡಲ್ಲ
**3** ಪ್ರ. ರೇವಣ್ಣ ಬಳಿ ಮೊಬೈಲ್ ಪತ್ತೆ

ಪರಪ್ಪನ ಅಗ್ರಹಾರ ಜೈಲಿನಲ್ಲಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಸೆಲ್‌ನಲ್ಲಿ ಮೊಬೈಲ್ ಫೋನ್ ಪತ್ತೆಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ, ಯಾವುದೇ ಅಧಿಕಾರಿಯೇ ಹೊಣೆಗಾರನೆಂದು ತನಿಖೆಯಲ್ಲಿ ತಿಳಿದುಬಂದರೆ ಅವರ ಹುದ್ದೆ ಅಥವಾ ಶ್ರೇಣಿ ಪರಿಗಣಿಸದೆ ಕ್ರಮ ಕೈಗೊಳ್ಳಲಾಗುವುದು ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಕಾರಾಗೃಹದಲ್ಲಿ ಆಗಬಾರದ ಚಟುವಟಿಕೆಗಳು ನಡೆದಾಗ ಕ್ರಮ ಆಗಬೇಕು. ವೈರಲ್‌ಆಗಿರುವ ಪ್ರಜ್ವಲ್ ವಿಡಿಯೋ ಸ್ವಲ್ಪ ಹಳೆಯದಾಗಿದ್ದು, ಯಾರು ಅದನ್ನು ಮಾಡಿದ್ದಾರೆ ಎಂಬ ಬಗ್ಗೆ ಹೇಳೋಕಾಗುತ್ತಾ, ಯಾರು ಕೊಟ್ಟರು, ಏನ್ ಕೊಟ್ಟರು ಎಂಬ ಬಗ್ಗೆ ಹೇಳಲು ಆಗಲ್ಲ. ಆದರೆ ಯಾರೇ ಸಹಕಾರ ಕೊಟ್ಟರು ಅವರ ಮೇಲೆ ಕ್ರಮ ಆಗುತ್ತದೆ.

ಪೇದೆಯಿಂದ ಹಿಡಿದು ಯಾರನ್ನೂ ನನ್ನ ಕಾಲದಲ್ಲಿ ರಕ್ಷಣೆ ಮಾಡಲ್ಲ ಎಂದು ಎಚ್ಚರಿಸಿದ್ದಾರೆ. ಜೈಲಿನೊಳಗೆ ಪ್ರಜ್ವಲ್ ರೇವಣ್ಣ ಬಳಿ ಮೊಬೈಲ್ ಫೋನ್ ಪತ್ತೆಯಾಗಿದೆ ಎಂಬ ವರದಿಗಳ ಹಿನ್ನೆಲೆಯಲ್ಲಿ ಜೈಲು ಭದ್ರತೆ ಕುರಿತು ಕಳವಳ ಹೆಚ್ಚಾಗಿರುವ ಸಂದರ್ಭದಲ್ಲಿ ಗೃಹ ಸಚಿವರು ಈ ಹೇಳಿಕೆ ನೀಡಿದ್ದಾರೆ.
ಹೈ-ಸೆಕ್ಯುರಿಟಿ ಜೈಲಿನೊಳಗೆ ಮೊಬೈಲ್ ಫೋನ್ ಹೇಗೆ ಪ್ರವೇಶಿಸಿತು, ಜೈಲು ಸಿಬ್ಬಂದಿ ಅಗತ್ಯ ಭದ್ರತಾ ನಿಯಮಗಳನ್ನು ಪಾಲಿಸುವಲ್ಲಿ ವಿಫಲರಾಗಿದ್ದಾರೆಯೇ ಎಂಬ ಪ್ರಶ್ನೆಗಳು ಇದೀಗ ಎದ್ದಿವೆ.
**ಸಜಾ ಕೈದಿ ಪ್ರಜ್ವಲ್ ರೇವಣ್ಣ ಬಳಿ ಮೊಬೈಲ್ ಪತ್ತೆ:** ಜನರಲ್ ಸೆಲ್ ಗೆ ಶಿಫ್ಟ್, ಲೈಬ್ರರಿ ಕೆಲಸ ಮಾಡುವಂತೆ ತಾಕೀತು


ಉದಯವಾಹಿನಿ ಚಿತ್ರ

ಬಂದ್ ಹಿನ್ನೆಲೆಯಲ್ಲಿ ಭದ್ರತಾ ವ್ಯವಸ್ಥೆ ಕುರಿತು ಬೆಂಗಳೂರು ಗ್ರಾಮಾಂತರ ಎಸ್‌ಪಿ ಚಂದ್ರಕಾಂತ್ ಮಾತನಾಡಿ, ಕರ್ನಾಟಕ ರಾಜ್ಯ ಮೀಸಲು ಪೊಲೀಸ್ (ಕೆಎಸ್‌ಆರ್‌ಪಿ), ಜಿಲ್ಲಾ ಮೀಸಲು ಪಡೆ (ಡಿಆರ್) ಹಾಗೂ ಸ್ಥಳೀಯ ಪೊಲೀಸರನ್ನು ಒಳಗೊಂಡಂತೆ ಹೆಚ್ಚಿನ ಸಂಖ್ಯೆಯ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ತಿಳಿಸಿದರು. ವಿಶೇಷವಾಗಿ ಸೂಕ್ಷ್ಮ ಪ್ರದೇಶಗಳು ಹಾಗೂ ಕರ್ನಾಟಕ-ತಮಿಳುನಾಡು ಗಡಿಯಲ್ಲಿ ಹೆಚ್ಚಿನ ಭದ್ರತೆ ಕೈಗೊಳ್ಳಲಾಗಿದೆ ಎಂದರು.
15 ದಿನಗಳ ಅವಧಿಯಲ್ಲಿ ತಮಿಳುನಾಡಿಗೆ ಕರ್ನಾಟಕ 12,000 ಕ್ಯುಸೆಕ್ ನೀರು ಹರಿಸಬೇಕು ಎಂಬ ಕಾವೇರಿ ನೀರು ನಿಯಂತ್ರಣ ಸಮಿತಿಯ ನಿರ್ದೇಶನವನ್ನು ವಿರೋಧಿಸಿ ಬಂದ್‌ಗೆ ಕರೆ ನೀಡಲಾಗಿತ್ತು.ಪ್ರತಿಭಟನೆಗಳು ಶಾಂತಿಯುತವಾಗಿ ನಡೆಯುವಂತೆ ಹಾಗೂ ಸಾರ್ವಜನಿಕ ಸಂಚಾರಕ್ಕೆ ತೊಂದರೆಯಾಗದಂತೆ ಅಧಿಕಾರಿಗಳು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದಾರೆ. ಕನ್ನಡ ಜಾಗೃತಿ ವೇದಿಕೆಗೆ ಸೇರಿದ 18 ಮಂದಿಯನ್ನು ಮುಂಜಾಗ್ರತಾ ಕ್ರಮವಾಗಿ ವಶಕ್ಕೆ ಪಡೆಯಲಾಗಿದೆ ಎಂದು ಬೆಂಗಳೂರು ಗ್ರಾಮಾಂತರ ಪೊಲೀಸರು ತಿಳಿಸಿದ್ದಾರೆ.

ಜೈಲು ಮತ್ತು ಸುಧಾರಣಾ ಸೇವೆಗಳ ಡಿಜಿಪಿ ಅಲೋಕ್ ಕುಮಾರ್ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗಿದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಖರ್ಗೆ, ತನಿಖೆ ಇನ್ನೂ ನಡೆಯುತ್ತಿದೆ. ಅಧಿಕಾರಿ ಯಾರೇ ಆಗಿರಲಿ, ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಅವರು ಪಿಸಿ ಆಗಿರಲಿ, ಪಿಎಸ್‌ಐ ಆಗಿರಲಿ ಅಥವಾ ಎಡಿಜಿ ಆಗಿರಲಿ, ಯಾವುದೇ ವ್ಯತ್ಯಾಸವಿಲ್ಲ ಎಂದು ಹೇಳಿದರು. -ಪ್ರಿಯಾಂಕ್ ಖರ್ಗೆ

**ಭದ್ರತಾ ಸಿದ್ಧತೆ** ಇದೇ ವೇಳೆ, ಕಾವೇರಿ ನೀರು ವಿವಾದಕ್ಕೆ ಸಂಬಂಧಿಸಿದಂತೆ ಕನ್ನಡಪರ ಸಂಘಟನೆಗಳು ಕರೆ ನೀಡಿದ್ದ ರಾಜ್ಯವ್ಯಾಪಿ ಬಂದ್ ಹಿನ್ನೆಲೆಯಲ್ಲಿ ಪೊಲೀಸರು ಹಾಗೂ ರಾಜ್ಯ ಆಡಳಿತ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ವ್ಯಾಪಕ ಭದ್ರತಾ ಸಿದ್ಧತೆಗಳನ್ನು ಕೈಗೊಂಡಿದ್ದವು.

**ಪೊಲೀಸರು ಮನವಿ** ಬಂದ್ ನಡುವೆಯೂ ಕರ್ನಾಟಕ ಮತ್ತು ತಮಿಳುನಾಡು ನಡುವಿನ ವಾಹನ ಸಂಚಾರ ಸಾಮಾನ್ಯವಾಗಿತ್ತು. ಸಾರ್ವಜನಿಕರು ಆತಂಕ ಪಡದೆ ಎಂದಿನಂತೆ ತಮ್ಮ ದೈನಂದಿನ ಚಟುವಟಿಕೆಗಳನ್ನು ಮುಂದುವರಿಸಬಹುದು ಎಂದು ಪೊಲೀಸರು ಮನವಿ ಮಾಡಿದರು.

ಈ ಬಂಧನಗಳು ಮುನ್ನೆಚ್ಚರಿಕಾ ಕ್ರಮವಾಗಿದ್ದು, ಪರಿಸ್ಥಿತಿ ಸಹಜ ಸ್ಥಿತಿಗೆ ಮರಳಿದ ಬಳಿಕ ವಶಕ್ಕೆ ಪಡೆದವರನ್ನು ಬಿಡುಗಡೆ ಮಾಡಲಾಗುವುದು ಎಂದು ಚಂದ್ರಕಾಂತ್ ಹೇಳಿದರು.ಕಾವೇರಿ ವಿವಾದದ ಸೂಕ್ಷ್ಮತೆಯನ್ನು ಗಮನದಲ್ಲಿಟ್ಟುಕೊಂಡು ಹಾಗೂ ಅಂತಾರಾಜ್ಯ ಸಂಚಾರದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಹಿನ್ನೆಲೆಯಲ್ಲಿ ತಮಿಳುನಾಡು ಗಡಿಯಲ್ಲಿ ಭದ್ರತೆಯನ್ನು ಮತ್ತಷ್ಟು ಬಿಗಿಗೊಳಿಸಲಾಗಿತ್ತು.

# ಪ್ರಜ್ವಲ್ ಗೆ ಮೊದಲೇ ವಾರ್ನ್ ಮಾಡಿದ್ದೆ, ದರ್ಶನ್ ಸೆಲ್‌ನಲ್ಲಿ ಏನೂ ಸಿಕ್ಕಿಲ್ಲ-ಅಲೋಕ್ ಕುಮಾರ್

• ಉದಯವಾಹಿನಿ, ಬೆಂಗಳೂರು

ಪರಪ್ಪನ ಅಗ್ರಹಾರ ಜೈಲಿನ ಮೇಲೆ ಸಿಸಿಬಿ ದಾಳಿ ವೇಳೆ ಪ್ರಜ್ವಲ್ ರೇವಣ್ಣ ಬ್ಯಾರಕ್‌ನಲ್ಲಿ ಮೊಬೈಲ್ ಮತ್ತು ಪೆನ್ ಡ್ರೈವ್ ಪತ್ತೆಯಾದ ಪ್ರಕರಣ ಸಂಬಂಧ ಜೈಲು ಅಧಿಕಾರಿಗಳ ನಿರ್ಲಕ್ಷ್ಯ ವಿರುವುದು ಸಾಬೀತಾಗಿದ್ದು, ತನಿಖೆಗೆ ಕಾರಾಗೃಹ ಮತ್ತು ಸುಧಾರಣೆ ಇಲಾಖೆ ಡಿಐಜಿ ಜಿನೇಂದ್ರ ಖನಗಾವಿ ನೇತೃತ್ವದ ತಂಡ ರಚನೆ ಮಾಡಲಾಗಿದೆ. ಪರಪ್ಪನ ಅಗ್ರಹಾರ ಜೈಲಿನ ಬ್ಯಾರಕ್‌ನಲ್ಲಿ ಮೊಬೈಲ್ ಹೇಗೆ ಬಂತು ಎಂಬ ಬಗ್ಗೆ ಎಲ್ಲಾ ಆಯಾಮದಲ್ಲೂ ತನಿಖೆ ನಡೆಸಿ ವರದಿ ಸಲ್ಲಿಸಲು ಕಾರಾಗೃಹ




ಉದಯವಾಹಿನಿ ಚಿತ್ರ

ಡಿಜಿಪಿ ಅಲೋಕ್ ಕುಮಾರ್ ಸೂಚನೆ ನೀಡಿದ್ದಾರೆ. ಪರಪ್ಪನ ಅಗ್ರಹಾರ ಜೈಲಿನ ಸುತ್ತಮುತ್ತ ಜಾಮರ್ ಅಳವಡಿಸಲಾಗಿದ್ದು, ಸ್ಥಳೀಯರಿಗೆ ಟವರ್ ಸಿಗದೆ ನಿತ್ಯ ಪರದಾಡುತ್ತಾರೆ. ಜೈಲಿನ ಒಳಗೆ ಏರ್‌ಟೆಲ್ ಕಂಪನಿಯ ಸಿಮ್ ಬಳಕೆಯಾಗುತ್ತಿದೆ. ಅದರಲ್ಲೂ ಆಂಧ್ರಪ್ರದೇಶದ ಏರ್‌ಟೆಲ್ ಸಿಮ್‌ಗಳು ಪತ್ತೆಯಾಗಿವೆ, ಈ ಬಗ್ಗೆ ಅನೇಕ ಬಾರಿ ಎಚ್ಚರಿಕೆ ನೀಡಲಾಗಿದ್ದರೂ ಸಿಮ್‌ಗಳು ಪತ್ತೆ ಆಗುತ್ತಿವೆ. ಹೀಗಾಗಿ ಈ ಕುರಿತು ತನಿಖೆ ನಡೆಸಿ ವರದಿ ನೀಡಲು ಸೂಚಿಸಲಾಗಿದೆ ಎಂದು ರಾಜ್ಯ ಕಾರಾಗೃಹ ಡಿಜಿಪಿ ಅಲೋಕ್ ಕುಮಾರ್ ತಿಳಿಸಿದ್ದಾರೆ. ಇಷ್ಟೆಲ್ಲಾ ಭದ್ರತೆ ಇದ್ದರೂ ಜೈಲಿನೊಳಗೆ ಹೇಗೆ ಮೊಬೈಲ್ ಹೋಗ್ತಿದೆ ಇದರಲ್ಲಿ ಅಧಿಕಾರಿಗಳು ಏನಾದರೂ ಭಾಗಿಯಾಗಿದ್ದಾರೆಂಬ ಬಗ್ಗೆ ತನಿಖೆ ನಡೆಸುತ್ತೇವೆ.

## ಸರ್ಕಾರ ತನಿಖೆ ಮಾಡಲಿ

ಪುತ್ರನ ಮೊಬೈಲ್ ಪ್ರಕರಣ ಬಗ್ಗೆ ಇಂದು ವಿಧಾನಸೌಧ ಹೊರಗೆ ಮಾಧ್ಯಮ ಪ್ರತಿನಿಧಿಗಳು ಪ್ರಶ್ನೆ ಕೇಳಿದಾಗ ಹೆಚ್ ಡಿ ರೇವಣ್ಣ, ಗೃಹ ಇಲಾಖೆಯ ಜವಾಬ್ದಾರಿ ಪ್ರಿಯಾಂಕ್ ಖರ್ಗೆ ಅವರ ಬಳಿ ಇದೆ. ಅವರ ಪಕ್ಷವೇ ಅಧಿಕಾರದಲ್ಲಿದೆ. ಅವರೇ ತನಿಖೆ ನಡೆಸಲಿ ಎಂದಷ್ಟೇ ಹೇಳಿದರು.

# ವಿದ್ವಾಂಸರ ಗೌರವಕ್ಕೆ ಕೃಷ್ಣಕುಮಾರ್ ಪುಳಕಿತ

• ಉದಯವಾಹಿನಿ, ಬೆಂಗಳೂರು

ಮಿತ್ರ ಆಸ್ಟ್ರೋ ರಿಸರ್ಚ್ ಸೆಂಟರ್‌ರವರು ರಾಮಾನುಜ ಗುರುಕುಲ,ಬೆಂಗಳೂರು ಇವರ ಸಹಯೋಗದೊಂದಿಗೆ ಬಸವನಗುಡಿಯ ನ್ಯಾಷನಲ್ ಕಾಲೇಜ್ ಸಭಾಂಗಣದಲ್ಲಿ ಆಯೋಜಿಸಿದ್ದ ಆಚಾರ್ಯ ಪ್ರಭಾಕರ್ ಮೂರ್ತಿರವರ ಗುರುವಂದನ ಹಾಗೂ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತೃ ಸೇವೆಗೆ ಜೀವನವನ್ನು ಮುಡಿಪಿಟ್ಟಿರುವ ಹಾಗೂ ತನ್ನ ಹೆತ್ತ ತಾಯಿಯನ್ನು ತಂದೆ ಕೊಡಿಸಿದ ಸ್ಕೂಟರ್‌ನಲ್ಲಿ ಒಂದು ಲಕ್ಷ ಕಿಲೋಮೀಟರ್ ಗಳಿಗೂ ಹೆಚ್ಚು ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿರುವ ಮೈಸೂರಿನ ಡಿ ಕೃಷ್ಣಕುಮಾರ್ ಹಾಗೂ ಮಾತೃ ಶ್ರೀ ಚೂಡಾರತ್ನಮ್ಮನವರನ್ನು ಅಭಿಮಾನಪೂರ್ವಕವಾಗಿ ಗೌರವಿಸಿ ಮಾತೃ ಸೇವಾ ರತ್ನ ಬಿರುದನ್ನು ಪ್ರಧಾನ ಮಾಡಲಾಯಿತು.


ಉದಯವಾಹಿನಿ ಚಿತ್ರ

## ಬಂದ್ ವಾಪಸ್ ಪಡೆದ ಸಂಘಟನೆಗಳಿಗೆ ಕೃತಜ್ಞತೆಗಳು: ಸಿಎಂ ಡಿ ಕೆ ಶಿವಕುಮಾರ್

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ರಾಜ್ಯದ ಹಿತಕ್ಕಾಗಿ ಬಂದ್ ವಾಪಸ್ ಪಡೆದಿರುವ ಎಲ್ಲಾ ಸಂಘಟನೆಗಳಿಗೆ ಧನ್ಯವಾದಗಳು ಎಂದು ಸಿಎಂ ಡಿ ಕೆ ಶಿವಕುಮಾರ್ ಅವರು ತಿಳಿಸಿದರು. ವಿಧಾನಸೌಧದಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಶಿವಕುಮಾರ್ ಅವರು ಗುರುವಾರ ಪ್ರತಿಕ್ರಿಯೆ ನೀಡಿದರು. ಸಂಘಟನೆಗಳು ಕರೆ ನೀಡಿದ್ದ ಬಂದ್ ಹಿಂಪಡೆದ ಬಗ್ಗೆ ಕೇಳಿದಾಗ, ಎಲ್ಲಾ ಕನ್ನಡಪರ ಸಂಘಟನೆಗಳ ಮುಖಂಡರು ನನ್ನನ್ನು ಭೇಟಿ ಮಾಡಿ ಬಂದ್ ಹಿಂಪಡೆದಿರುವ ಬಗ್ಗೆ ಮಾಹಿತಿ ನೀಡಿದರು.

ರಾಜ್ಯದ ಜನರ ಹಿತ ಹಾಗೂ ರೈತರ ಕಲ್ಯಾಣಕ್ಕೆ ಸಂಬಂಧಿಸಿದಂತೆ ಅವರು ಕೆಲವು ಬೇಡಿಕೆ ಇಟ್ಟಿದ್ದಾರೆ. ಅವರ ಬೇಡಿಕೆಗಳನ್ನು ಪರಿಶೀಲನೆ ಮಾಡುವೆ. ಅವರ ಸಹಕಾರಕ್ಕೆ ಕೃತಜ್ಞತೆ ಎಂದು ತಿಳಿಸಿದರು.

ರಕ್ಷಣಾ ವೇದಿಕೆಯ ಪ್ರಮುಖ ನಾಯಕರು ನಮ್ಮನ್ನು ಭೇಟಿ ಮಾಡಿ ಪ್ರತಿಭಟನೆಯನ್ನು ಹಿಂತೆಗೆದುಕೊಳ್ಳುವುದಾಗಿ ಹೇಳಿದರು. ರಾಜ್ಯದ ಹಿತಾಸಕ್ತಿಗಾಗಿ ನಿಲುವು ತೆಗೆದುಕೊಂಡಿದ್ದಕ್ಕಾಗಿ ನನಗೆ ಸಂತೋಷವಾಗಿದೆ ಮತ್ತು ಅವರಿಗೆ ನನ್ನ ಧನ್ಯವಾದ ಮತ್ತು ಶುಭಾಶಯಗಳನ್ನು ತಿಳಿಸುತ್ತೇನೆ ಎಂದು ಅವರು ಹೇಳಿದರು. ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಮಾಡುವುದನ್ನು ವಿರೋಧಿಸಿ ಕನ್ನಡ ಮತ್ತು ರೈತ ಸಂಘಟನೆಗಳು ಕರ್ನಾಟಕ ಬಂದ್‌ಗೆ ಕರೆ ನೀಡಿದ್ದವು.

# ವನ್ಯಜೀವಿ ಪ್ರಪಂಚದಲ್ಲಿ ಆನೆಗಳ ಪಾತ್ರ ಬಹುದೊಡ್ಡದು

• ಉದಯವಾಹಿನಿ, ಬೆಂಗಳೂರು

ಪರಿಸರ ಮಂಜು ರವರ ಬನ್ನೇರುಘಟ್ಟದ ರಂಗ ಎಂಬ ಕೃತಿಯ ಮುಖಪುಟವನ್ನು ಬೆಂಗಳೂರು ದಕ್ಷಿಣ ವಲಯದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವಿ. ಗಣೇಶ್ ಅನಾವರಣಗೊಳಿಸಿದರು. ನಗರದ ಎಸಿಎಫ್ ಕಚೇರಿಯಲ್ಲಿ ವಿಶ್ವ ಆನೆಗಳ ದಿನಾಚರಣೆ ಪ್ರಯುಕ್ತ ಪರಿಸರ ಸಾಹಿತಿ, ಬರಹಗಾರ ಪರಿಸರ ಮಂಜು ಅವರು ರಚಿಸಿರುವ ಬನ್ನೇರುಘಟ್ಟದ ರಂಗ ಎಂಬ ಆನೆಯ ಕುರಿತು ಬರೆದ ಕೃತಿಯ ಮುಖಪುಟ ಬಿಡುಗಡೆ ಮಾಡಿ ಮಾತನಾಡಿದ ಅವರು ಸಾಂಸ್ಕೃತಿಕವಾಗಿ, ಜೈವಿಕವಾಗಿ, ವೈವಿಧ್ಯಮಯವಾಗಿ, ಅರಣ್ಯ ಹಾಗೂ ವನ್ಯಜೀವಿ ಪ್ರಪಂಚದಲ್ಲಿ ಆನೆಗಳ ಪಾತ್ರ ಬಹುದೊಡ್ಡದು ಅಂತಹ ಆನೆಗಳಲ್ಲಿ ರಂಗ ಆನೆಯ ಪಾತ್ರ ದೊಡ್ಡದ್ದು, ಅವನ ನಾಯಕತ್ವದ ಗುಣ, ಶಕ್ತಿ ಸಾಮರ್ಥ್ಯ ಹೊಂದಿದ ಆನೆ. ನಾಯಕತ್ವದ ಗುಣ, ಶಕ್ತಿ ಸಾಮರ್ಥ್ಯ ಹೊಂದಿದ, ಅಂತಹ ವಿಶೇಷ ವಂಶಾವಳಿ


ಉದಯವಾಹಿನಿ ಚಿತ್ರ

ಜನಾಂಗವನ್ನ ಕಳೆದುಕೊಂಡಿದ್ದೇವೆ ಎಂಬುದು ಬೇಸರ ಸಂಗತಿ ಎಂದರು. ವೈವಿಧ್ಯಮಯ ಜಗತ್ತಿನಲ್ಲಿ ರಂಗ ಅಪರೂಪದಲ್ಲಿ ಅಪರೂಪವಾದ ಆನೆ. ಆತನ ಚಟುವಟಿಕೆಗಳು, ಧೈರ್ಯ, ಸಾರ್ವಭೌಮತ್ವ ಸದಾ ಚಿರಪರಿಚಿತ.

ರಸ್ತೆ ಅಪಘಾತದಲ್ಲಿ ಮೃತಪಟ್ಟ ರಂಗನ ಬಗ್ಗೆ ಕುತೂಹಲಕಾರಿ ಮಾಹಿತಿಗಳನ್ನು ಒಳಗೊಂಡ ಪುಸ್ತಕ ಮೂಡಿಬರಲಿ ಎಂದು ನುಡಿದರು. ಬರಹಗಾರ ಪರಿಸರ ಮಂಜು ಮತನಾಡಿ, ಆನೆಗಳ ವಾಸಸ್ಥಾನಗಳನ್ನು ರಕ್ಷಿಸದಿದ್ದರೆ ಮುಂದಿನ ದಿನಗಳಲ್ಲಿ ಇಂತಹ ಇನ್ನು ನೂರಾರು 'ರಂಗಗಳನ್ನು ಕಳೆದುಕೊಳ್ಳಬೇಕಾಗುತ್ತದೆ. ರಂಗ ಆನೆ ಬದುಕಿದ್ದರೆ ಇಂದು ದಸರಾ ಅಂಬಾರಿಯಲ್ಲಿ ಕಾಣಬಹುದಾಗಿತ್ತು.

ದುರದೃಷ್ಟಕರ ಆನೆ ಇಂದು ಇಲ್ಲ. ಆನೆ ರಂಗನ ಬಗ್ಗೆ ಅಕ್ಟೋಬರ್ ತಿಂಗಳಲ್ಲಿ ಅರಣ್ಯ ಇಲಾಖೆ ಆಯೋಜಿಸುವ ವನ್ಯಜೀವಿ ಸಪ್ತಾಹ ಕಾರ್ಯಕ್ರಮದಲ್ಲಿ ಪುಸ್ತಕ ಲೋಕಾರ್ಪಣೆ ಮಾಡಲಾಗುತ್ತದೆ ಎಂದು ಹೇಳಿದರು.

ಮಿಡಿತ ಫೌಂಡೇಶನ್ ಅಧ್ಯಕ್ಷ ಹಾಗೂ ಬರಹಗಾರ ಪರಿಸರ ಮಂಜುನಾಥ್, ಆನೇಕಲ್ ವಿಶ್ವಚೇತನ ಸಂಸ್ಥೆಯ ಶ್ರೀಕಾಂತ್, ಮಿಡಿತ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ, ಸೌಮ್ಯ ಕೃಷ್ಣ ನಾಯಕ್, ಗೌರವಾಧ್ಯಕ್ಷ ಸಿಂಹಾದ್ರಿ, ಸದಸ್ಯರಾದ ಪ್ರಕೃತಿ ಸಂತೋಷ್ ಉಪಸ್ಥಿತರಿದ್ದರು.

## 13 ಖಜಾನೆ ಕಚೇರಿಗಳ ಮೇಲೆ ಲೋಕಾಯುಕ್ತ ದಾಳಿ

• ಉದಯವಾಹಿನಿ, ಬೆಂಗಳೂರು

ಬಿಲ್ ವಿಲೇವಾರಿಯಲ್ಲಿ ವಿಳಂಬ, ಹಣ ಮಂಜೂರಾತಿ ಭ್ರಷ್ಟಾಚಾರ ನಡೆಯುತ್ತಿರುವುದಾಗಿ ಆರೋಪಿಸಿ ಸಾರ್ವಜನಿಕರಿಂದ ಬಂದ ದೂರಿನ ಮೇರೆಗೆ ಖಜಾನೆ ಇಲಾಖೆಯ ವಿವಿಧ ಕಚೇರಿಗಳ ಮೇಲೆ ಲೋಕಾಯುಕ್ತ ತಂಡ ಏಕಾಏಕಿ ದಾಳಿ ನಡೆಸಿ ಪರಿಶೀಲನೆ ನಡೆಸಿದೆ.

ಕೆ.ಆರ್.ವೃತ್ತದಲ್ಲಿರುವ ರಾಜ್ಯ ಹುಜೂರ್ ಖಜಾನೆ ಕಚೇರಿಗೆ ಲೋಕಾಯುಕ್ತ ಬಿ.ಎಸ್ .ಪಾಟೀಲ್ ಅವರು, ಕೆಜಿಐಡಿ, ವಿ.ವಿ.ಟವರ್ ಇತರೆ ಖಜಾನೆಗಳ ಮೇಲೆ ಉಪಲೋಕಾಯುಕ್ತ ಕೆ.ಎನ್.ಫಣೀಂದ್ರ, ಬೆಂಗಳೂರು ಉತ್ತರ ಖಜಾನೆ ಮಲ್ಲೇಶ್ವರ, ಯಲಹಂಕ ಸೇರಿದಂತೆ ಖಜಾನೆಗಳ ಮೇಲೆ ಬಿ.ವೀರಪ್ಪ, ಲೋಕಾಯುಕ್ತ ಎಡಿಜಿಪಿ ಮನೀಶ್ ಖರ್ಬೀಕರ್ ನೇತೃತ್ವದ ತಂಡವು ನಗರದ ಕಂದಾಯ ಭವನದಲ್ಲಿರುವ ಖಜಾನೆ ಕಚೇರಿ ಮೇಲೆ ದಾಳಿ ನಡೆಸಿದೆ.

ಲೋಕಾಯುಕ್ತ ತಂಡ ಏಕಾಏಕಿ ದಾಳಿ ನಡೆಸಿ ವೇಳೆ ಲೋಕಾಯುಕ್ತರ ಕಾರು ಚಾಲಕರ ಬೆಂಗಾವಲು ಪಡೆ ಚಾಲಕರ ಬಳಿಯೂ ಲಂಚ ಪಡೆದಿರುವುದು ಗೊತ್ತಾಗಿದೆ.

ಹುಜೂರ್ ಖಜಾನೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪ್ರಥಮ ದರ್ಜೆ ಸಹಾಯಕ ಕೃಷ್ಣ, ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್ ಅವರ ಪೈಲಟ್ ವಾಹನದ ಚಾಲಕನಿಂದ 3,000 ರೂ. ಲಂಚ ಪಡೆದಿರುವುದು ಬೆಳಕಿಗೆ ಬಂದಿದೆ.

ಆರೋಪಿ ಕೃಷ್ಣ ಅವರ ಡಿಜಿಟಲ್ ವ್ಯಾಲೆಟ್ ಅನ್ನು ಪರಿಶೀಲಿಸಿದಾಗ ಲೋಕಾಯುಕ್ತ ನ್ಯಾಯಮೂರ್ತಿ ಪಾಟೀಲ್ ನೇತೃತ್ವದ ಅಧಿಕಾರಿಗಳ ತಂಡವು ಆತನನ್ನು ಬಂಧಿಸಿತು.

# ಆ.22ರೊಳಗೆ ಸೈಟ್ ಕ್ಲೀನ್ ಮಾಡದಿದ್ದರೆ ಬೀಳುತ್ತೆ ಭಾರಿ ದಂಡ..

## ಹೆಚ್ಚುವರಿ ಸಮಯವನ್ನು ಬಳಸಿಕೊಂಡು ನಗರದಾದ್ಯಂತ ತಮ್ಮ ನಿವೇಶನಗಳನ್ನು ಸ್ವಚ್ಛಗೊಳಿಸುವಂತೆ ಎಲ್ಲ ಆಸ್ತಿ ಮಾಲೀಕರಿಗೆ ಮನವಿ ಮಾಡುತ್ತೇವೆ.

• ಉದಯವಾಹಿನಿ, ಬೆಂಗಳೂರು

ರಾಜಧಾನಿಯ ಖಾಲಿ ನಿವೇಶನಗಳ ಮಾಲೀಕರಿಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಬಿಗ್ ರಿಲೀಫ್ ನೀಡಿದ್ದು, ಪ್ಲಾಟ್‌ಗಳಲ್ಲಿರುವ ಕಸ ಮತ್ತು ಗಿಡಗಂಟೆಗಳನ್ನು ತೆರವುಗೊಳಿಸಲು ನೀಡಿದ್ದ ಗಡುವನ್ನು ಆಗಸ್ಟ್ 22, 2026ರವರೆಗೆ ವಿಸ್ತರಿಸಿದೆ. ಖಾಲಿ ನಿವೇಶನಗಳಲ್ಲಿ ಕಸ ಹಾಗೂ ನಿರ್ಮಾಣ ತ್ಯಾಜ್ಯ ತೆರವುಗೊಳಿಸಲು ಗುತ್ತಿಗೆದಾರರು ಸಿಗುತ್ತಿಲ್ಲ. ಹೀಗಾಗಿ ಇನ್ನಷ್ಟು ದಿನಗಳ ಕಾಲಾವಕಾಶ ನೀಡುವಂತೆ ನಿವೇಶನ ಮಾಲೀಕರು ಮನವಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಗಡುವು ವಿಸ್ತರಿಸಿ, ಅಧಿಸೂಚನೆ ಹೊರಡಿಸಿದೆ.

ಹೆಚ್ಚುವರಿ ಸಮಯವನ್ನು ಬಳಸಿಕೊಂಡು ನಗರದಾದ್ಯಂತ ತಮ್ಮ ನಿವೇಶನಗಳನ್ನು ಸ್ವಚ್ಛಗೊಳಿಸುವಂತೆ ಆಸ್ತಿ ಮಾಲೀಕರಿಗೆ ಮನವಿ ಮಾಡುತ್ತೇವೆ. ಸಾರ್ವಜನಿಕ ಸ್ಥಳಗಳಲ್ಲಿನ ತ್ಯಾಜ್ಯ ತೆರವು ನಮ್ಮೆಲ್ಲರ ಜವಾಬ್ದಾರಿ. ಖಾಸಗಿ ಆಸ್ತಿಯ ನಿರ್ವಹಣೆ ಅದರ ಮಾಲೀಕರ ಜವಾಬ್ದಾರಿ. ಎಲ್ಲರೂ ಕೈಜೋಡಿಸಿದಾಗ ಮಾತ್ರ ಬೆಂಗಳೂರು ಮತ್ತಷ್ಟು ಉತ್ತಮ ನಗರವಾಗಲಿದೆ'' ಎಂದು ಪ್ರಕಟಣೆಯಲ್ಲಿ ತಿಳಿಸಿದೆ.
ಖಾಲಿ ನಿವೇಶನಗಳ ಸ್ವಚ್ಛತೆಗೆ ವಿಧಿಸಲಾಗುತ್ತಿರುವ ಶುಲ್ಕ ದುಬಾರಿಯಾಗಿದೆ ಎಂಬ ಆರೋಪಗಳ ಕುರಿತು ಪ್ರತಿಕ್ರಿಯಿಸಿರುವ, ದರಗಳನ್ನು ಏಕಪಕ್ಷೀಯವಾಗಿ ನಿಗದಿಪಡಿಸಿಲ್ಲ ಎಂದು ಸ್ಪಷ್ಟಪಡಿಸಿದೆ. ವಿವಿಧ ಕಾಮಗಾರಿಗಳಿಗೆ ಸರ್ಕಾರ ನಿಗದಿಪಡಿಸಿರುವ ಷೆಡ್ಯೂಲ್ ಆಫ್ ರೇಟ್ಸ್ ಆಧಾರದ ಮೇಲೆ ದರ ನಿಗದಿಪಡಿಸಲಾಗಿದೆ. ನಿವೇಶನದ ವಿಸ್ತೀರ್ಣ, ತೆರವುಗೊಳಿಸಬೇಕಾದ ತ್ಯಾಜ್ಯದ ಪ್ರಮಾಣ ಹಾಗೂ



ಉದಯವಾಹಿನಿ ಚಿತ್ರ

ಇತರ ಕಾಮಗಾರಿಗಳ ಆಧಾರದ ಮೇಲೆ ವೆಚ್ಚ ಲೆಕ್ಕ ಹಾಕಲಾಗುತ್ತದೆ. ತ್ಯಾಜ್ಯ ಸಾಗಣೆ ವೆಚ್ಚವನ್ನೂ ಇದರಲ್ಲಿ ಪರಿಗಣಿಸಲಾಗುತ್ತದೆ ಎಂದು ತಿಳಿಸಿದೆ.

'ಫ್ರೀಡಂ ಫ್ರಂ ವೇಸ್ಟ್' ಅಭಿಯಾನವನ್ನು ತೀವ್ರಗೊಳಿಸಲಾಗಿದ್ದು, ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛಗೊಳಿಸಲಾಗುತ್ತಿದೆ. ಅಭಿಯಾನದಡಿ ಅಕ್ರಮವಾಗಿ ಸುರಿಯಲಾಗಿರುವ ನಿರ್ಮಾಣ ತ್ಯಾಜ್ಯ, ಬೆಳೆದಿರುವ ಕಳೆ ಹಾಗೂ ಇತರ ತ್ಯಾಜ್ಯ ತೆರವುಗೊಳಿಸಲು ನಗರದಾದ್ಯಂತ 100 ಟ್ರಕ್‌ಗಳು ಮತ್ತು 25 ಅಗೆಯುವ ಯಂತ್ರಗಳನ್ನು ನಿಯೋಜಿಸಲಾಗಿದೆ. ಇದುವರೆಗೆ 30,000 ಟನ್‌ಗೂ ಅಧಿಕ ನಿರ್ಮಾಣ ತ್ಯಾಜ್ಯ ಹಾಗೂ ಬೆಳೆದಿರುವ ಸಸ್ಯವರ್ಗವನ್ನು ತೆರವುಗೊಳಿಸಲಾಗಿದೆ ಎಂದು ತಿಳಿಸಿದೆ.

ನಗರವನ್ನು ಅಆ ತ್ಯಾಜ್ಯ ಮುಕ್ತಗೊಳಿಸುವ ನಿಟ್ಟಿನಲ್ಲಿ ಕ್ರಮಗಳನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು ಎಂದು ತಿಳಿಸಿದ್ದಾರೆ.ಆಯುಕ್ತರು

'ಫ್ರೀಡಂ ಫ್ರಂ ವೇಸ್ಟ್' ಅಭಿಯಾನದ ಭಾಗವಾಗಿ ಬೆಂಗಳೂರು ಉತ್ತರ ನಗರ ಪಾಲಿಕೆ ಆಗಸ್ಟ್ 1ರಿಂದ 1ರವರೆಗೆ 7,694 ಟನ್ ನಿರ್ಮಾಣ ಮತ್ತು ನೆಲಸಮಗೊಳಿಸುವ ತ್ಯಾಜ್ಯವನ್ನು ತೆರವುಗೊಳಿಸಿದೆ ಎಂದು ತಿಳಿಸಿದ್ದಾರೆ. - ಪೊಮ್ಮಲ ಸುನೀಲ್‌ಕುಮಾರ್

## ವಿಲೇವಾರಿ ಮಾಡುವ ಮೂಲಕ ಪಾಲಿಕೆಯೊಂದಿಗೆ ಸಹಕರಿ

ರಸ್ತೆ ಬದಿ, ಚರಂಡಿ, ಖಾಲಿ ನಿವೇಶನ ಅಥವಾ ಇತರ ಸಾರ್ವಜನಿಕ ಸ್ಥಳಗಳಲ್ಲಿ ನಿರ್ಮಾಣ ತ್ಯಾಜ್ಯವನ್ನು ಸುರಿಯದಂತೆ ನಾಗರಿಕರಿಗೆ ಮನವಿ ಮಾಡಿರುವ ಅವರು, ತ್ಯಾಜ್ಯವನ್ನು ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡುವ ಮೂಲಕ ಪಾಲಿಕೆಯೊಂದಿಗೆ ಸಹಕರಿಸುವಂತೆ ಕೋರಿದ್ದಾರೆ.

**ಗುಂಡಿಗಳಿಗೆ ಸಾಗಿಸಿ** ತೆರವುಗೊಳಿಸಿದ ತ್ಯಾಜ್ಯವನ್ನು ಮರೇನಹಳ್ಳಿ, ವೆಂಕಟಾಪುರ, ವಿಟ್ಟಸಂದ್ರ ಹಾಗೂ ಯಾರಪ್ಪನಹಳ್ಳಿ ಪ್ರದೇಶಗಳಲ್ಲಿರುವ ಕ್ವಾರಿ ಗುಂಡಿಗಳಿಗೆ ಸಾಗಿಸಿ ವಿಲೇವಾರಿ ಮಾಡಲಾಗಿದೆ. ಈ ಪೈಕಿ ಮರೇನಹಳ್ಳಿಯಲ್ಲಿ ಹೆಚ್ಚಿನ ಸ್ಥಳಾವಕಾಶ ಇರುವುದರಿಂದ ವ್ಯಾಪ್ತಿಯಲ್ಲಿ ಅತಿ ಹೆಚ್ಚು ತ್ಯಾಜ್ಯವನ್ನು ಅಲ್ಲಿಗೆ ಸಾಗಿಸಿ ವಿಲೇವಾರಿ ಮಾಡಲಾಗಿದೆ.

## ಗುಡ್ಡೆ ಕೆರೆಯ ನಾಲೆಗೆ ಕೊಳಚೆ ನೀರು, ದುರ್ವಾಸನೆ

• ಉದಯವಾಹಿನಿ, ಬಿಡದಿ

ಪುರಸಭೆ ವ್ಯಾಪ್ತಿಯ ವಾರ್ಡ್ ಸಂಖ್ಯೆ 4ರಲ್ಲಿ ಕೆಂಚನಕುಪ್ಪೆ ಗ್ರಾಮದ ಚರಂಡಿ ಕೊಳಚೆ ನೀರನ್ನು ಅನಧಿಕೃತವಾಗಿ ನಲ್ಲಿಗುಡ್ಡೆ ಕೆರೆಯ ಮುಖ್ಯ ನಾಲೆಗೆ ಹರಿಸಲಾಗುತ್ತಿದೆ. ಇದರಿಂದ ಈ ವ್ಯಾಪ್ತಿಯಲ್ಲಿ ದುರ್ನಾತ ಬೀರುತ್ತಿದ್ದು, ಜನಸಾಮಾನ್ಯರು ಮೂಗು ಮುಚ್ಚಿಕೊಂಡು ಓಡಾಡುವ ಅನಿವಾರ್ಯತೆ ಎದುರಾಗಿದೆ. ಚರಂಡಿ ನೀರು ಶೇಖರಣೆಯಾಗುತ್ತಿರುವುದರಿಂದಾಗಿ ಸೊಳ್ಳೆಗಳ ಕಾಟ ಹೆಚ್ಚಾಗಿದ್ದು, ರೋಗರುಜಿನಗಳು ಹರಡುವ ಭೀತಿ ಎದುರಾಗಿದೆ. ಕೆರೆಯ ನಾಲೆ ದುರಸ್ತಿಗೆ ಕ್ರಮ ಕೈಗೊಳ್ಳುವಂತೆ ಸಣ್ಣ ನೀರಾವರಿ ಇಲಾಖೆ ಮತ್ತು ಪುರಸಭೆ ಅಧಿಕಾರಿಗಳಿಗೆ ಕೆಂಚನಕುಪ್ಪೆ ಗ್ರಾಮದ ಜನರು ಮನವಿ ಸಲ್ಲಿಸಿದ್ದಾರೆ. ಆದರೆ, ಯಾವುದೇ ಪ್ರಯೋಜನವಾಗಿಲ್ಲ ಎಂದು ಗ್ರಾಮಸ್ಥರು ದೂರಿದರು. ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳು ಈ ನಾಲೆ ದುರಸ್ತಿ ತಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ಸಬೂಬು ಹೇಳುತ್ತಿದ್ದಾರೆ ಎಂದು ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದರು. ನಲ್ಲಿಗುಡ್ಡೆ ಕೆರೆಯ ನಿರ್ವಹಣೆ ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯಲ್ಲಿದ್ದರೂ, ಗ್ರಾಮದ ಒಳಗಿನ ನಾಲೆ ಭಾಗವು ಪುರಸಭೆ ವ್ಯಾಪ್ತಿಗೆ ಬರುತ್ತದೆ. ಆದ್ದರಿಂದ ನಾಲೆಗೆ ಅನಧಿಕೃತವಾಗಿ ಹರಿಯುತ್ತಿರುವ ಚರಂಡಿ ನೀರನ್ನು ತಕ್ಷಣವೇ ತಡೆಯಬೇಕು.

## ಸ್ವಾತಂತ್ರ್ಯ ದಿನಕ್ಕೆ 3.38 ಲಕ್ಷ ಲಡ್ಡು ವಿತರಿಸಿದ ಶಾಸಕ ಇಕ್ಬಾಲ್ ಹುಸೇನ್

• ಉದಯವಾಹಿನಿ, ರಾಮನಗರ


ಉದಯವಾಹಿನಿ ಚಿತ್ರ

ರಾಮನಗರ ಜಿಲ್ಲೆಯ ಎಲ್ಲಾ ಶಾಲಾ ಕಾಲೇಜುಗಳ ಮಕ್ಕಳು, ಸರ್ಕಾರಿ ಕಚೇರಿಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗಕ್ಕೆ ಸ್ವತಂತ್ರ ದಿನದ ಅಂಗವಾಗಿ 3.38 ಲಕ್ಷ ಲಡ್ಡುಗಳನ್ನು ಶಾಸಕ ಇಕ್ಬಾಲ್ ಹುಸೇನ್ ವಿತರಿಸಿದರು.

ತಾಲ್ಲೂಕಿನ ಜಯಪುರ ಸಮೀಪದ ಎಸ್.ಎಸ್.ಕಲ್ಯಾಣ ಮಂಟಪದಲ್ಲಿ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಸರ್ಕಾರಿ ಇಲಾಖೆಯ ಮುಖ್ಯಸ್ಥರಿಗೆ ಲಡ್ಡುಗಳನ್ನು ಹಸ್ತಾಂತರಿಸಿ ಮಾತನಾಡಿದ ಅವರು, ಕಳೆದ 15 ವರ್ಷಗಳಿಂದ ಸ್ವತಂತ್ರ ದಿನದ ಅಂಗವಾಗಿ ಮಕ್ಕಳಿಗೆ ಮತ್ತು ಸರ್ಕಾರಿ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಸಿಹಿ ವಿತರಿಸುವ ಶಕ್ತಿಯನ್ನು ಭಗವಂತ ನನಗೆ ನೀಡಿದ್ದು, ಇಲ್ಲಿನ ಜನರು ಮತ್ತು ನನ್ನನ್ನು ಬೆಳೆಸಿದ ಡಿಕೆಶಿ ಸಹೋದರರಿಗೆ ಋಣಿಯಾಗಿರುತ್ತೇನೆ ಎಂದು ಹೇಳಿದರು.

ಜಿಲ್ಲೆಯಲ್ಲಿನ 1351 ಅಂಗನವಾಡಿ ಕೇಂದ್ರಗಳು, 1574 ಸರ್ಕಾರಿ, ಖಾಸಗಿ, ಅನುದಾನ ರಹಿತ, ಅನುದಾನಿತ ಶಾಲೆಗಳು, 88 ಪದವಿಪೂರ್ವ ಕಾಲೇಜುಗಳು, 86 ಇತರೆ ಕಾಲೇಜುಗಳು ಹಾಗೂ ಸರ್ಕಾರಿ ಕಚೇರಿಗಳ ಅಧಿಕಾರಿಗಳು, ಸಿಬ್ಬಂದಿ ವರ್ಗದವರಿಗೆ ಒಟ್ಟು 3,38,247 ಲಡ್ಡುಗಳನ್ನು ವಿತರಿಸಲಾಗುತ್ತಿದೆ ಎಂದರು. ಪ್ರತಿ ವರ್ಷ ಬಾಕ್ಸ್‌ಗಳಲ್ಲಿ ವಿತರಿಸಲಾಗುತ್ತಿತ್ತು, ಮಕ್ಕಳ ಆರೋಗ್ಯದ ದೃಷ್ಠಿಯಿಂದ ಈ ಬಾರಿ ಚಿಕ್ಕ ಮತ್ತು ದೊಡ್ಡ ಗಾತ್ರದ ಬಕೇಟ್ ಗಳಲ್ಲಿ ವಿತರಣೆ ಮಾಡಲಾಗುತ್ತಿದೆ ಎಂದರು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಚೇತನ್ ಕುಮಾರ್, ಪ್ರಾಧಿಕಾರದ ಮಾಜಿ ಸಿಎನ್.ಆರ್.ವೆಂಕಟೇಶ್, ಪ್ರಮುಖರಾದ ವಿ.ಎಚ್.ರಾಜು, ನಗರಸಭೆ ಉಪಾಧ್ಯಕ್ಷೆ ಗಿರಿಜಮ್ಮ, ಬಿಇಓ ಸೋಮಲಿಂಗಯ್ಯ, ಸರ್ಕಾರಿ ನೌಕರ ಸಂಘದ ಅಧ್ಯಕ್ಷ ಸತೀಶ್, ನಗರಸಭೆ ಮಾಜಿ ಅಧ್ಯಕ್ಷೆ ಪಾರ್ವತಮ್ಮ ಮತ್ತಿತರರು ಇದ್ದರು.

## ಮಿನಿ ನ್ಯೂಸ್

### ಪಂ. ಚುನಾವಣೆ ಪ್ರತಿಷ್ಠೆಯಾಗಿ ಸ್ವೀಕರಿಸಿ- ರಾಧಾಕೃಷ್ಣ ರೆಡ್ಡಿ

• ಉದಯವಾಹಿನಿ, ಕೆಜಿಎಫ್

ಪಂಚಾಯಿತಿ ಚುನಾವಣೆಗಳು ಬರಲಿರುವುದರಿಂದ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ತಮ್ಮ ಹಳ್ಳಿಗಳಲ್ಲಿ ಸರ್ಕಾರ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನೀಡಿರುವ ಪಂಚ ಗ್ಯಾರಂಟಿ ಯೋಜನೆಗಳನ್ನು ಮನೆ ಮನೆಗೆ ತಲುಪಿಸುವ ಮೂಲಕ ಪಕ್ಷ ಸಂಘಟನೆಯನ್ನು ನಿಷ್ಠೆಯಿಂದ ಮಾಡಬೇಕು ಎಂದು ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ರಾಧಾಕೃಷ್ಣ ರೆಡ್ಡಿ ಹೇಳಿದರು.

ಕಂಗಾಂಡ್ಲಹಳ್ಳಿ ಪಂಚಾಯಿತಿ ವ್ಯಾಪ್ತಿಯ ತೊಂಗಲಕುಪ್ಪದಲ್ಲಿ ಹಮ್ಮಿಕೊಂಡಿದ್ದ ಪಂಚಾಯಿತಿ ವ್ಯಾಪ್ತಿಯ ಕಾಂಗ್ರೆಸ್ ಕಾರ್ಯಕರ್ತರ ಭಾರತ್ ಜೋಡೋ ಸದಸ್ಯರ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು,ಪಕ್ಷಕ್ಕೆ ನಿಷ್ಠೆಯಿಂದ ಇದ್ದರೆ ಪಕ್ಷ ಕಾರ್ಯಕರ್ತರು ಮುಖಂಡರನ್ನು ಗುರುತಿಸಿ ಅವಕಾಶಗಳನ್ನು ಕಲ್ಪಿಸಲಿದೆ ಎಂಬುದಕ್ಕೆ ನಾನೇ ಸಾಕ್ಷಿ ಎಂದ ಅವರು,ಕಳೆದ 40 ವರ್ಷಗಳಿಂದ ತಾಲ್ಲೂಕಿನಲ್ಲಿ ಕಾಂಗ್ರೆಸ್ ಶಾಸಕರು ಆಯ್ಕೆಯಾಗದಿದ್ದರು. ಪಕ್ಷ ಸಂಘಟನೆ ಮಾಡಿಕೊಂಡು ಬಂದಿದ್ದೇನೆ. ಪಂಚಾಯಿತಿ ಮಟ್ಟದಲ್ಲಿ ಗಟ್ಟಿಯಾಗಿ ಪಕ್ಷಕ್ಕೆ ತಳಹಾದಿ ಹಾಕಿದರೆ ನೀವು ಚುನಾವಣೆಯಲ್ಲಿ ಜಯಗಳಿಸಲು ಸುಲಭವಾಗದೆ ಎಂದು ಹೇಳಿದರು.

### ಭೀಮನ ಅಮಾವಾಸ್ಯೆ ವಿಶೇಷ ಮಲೆ ಮಾದಪ್ಪನಿಗೆ ವಿಶೇಷ ಪೂಜೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಹನೂರು

ತಾಲ್ಲೂಕಿನ ಪ್ರಸಿದ್ಧ ಧಾರ್ಮಿಕ ಪುಣ್ಯಕ್ಷೇತ್ರ ಶ್ರೀ ಮಲೆ ಮಹದೇಶ್ವರ ಬೆಟ್ಟದಲ್ಲಿ ಭೀಮನ ಅಮಾವಾಸ್ಯೆ ಹಿನ್ನೆಲೆ ಜಿಲ್ಲೆ ತಾಲ್ಲೂಕು ಸೇರಿದಂತೆ ರಾಜ್ಯ ತಮಿಳುನಾಡು ವಿವಿಧ ಭಾಗಗಳಿಂದ ಸಹಸ್ರಾರಾರು ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸಿ ಶ್ರೀ ಮಲೆ ಮಾದಪ್ಪನ ದರ್ಶನ ಪಡೆದು ಎಣ್ಣೆ ಮಜ್ಜನ ಸೇವೆ ಪೂಜೆ ಚಿನ್ನದ ರಥೋತ್ಸವದಲ್ಲಿ ಪಾಲ್ಗೊಂಡು ಹರಕೆ ಸಲ್ಲಿಸಿದ್ದಾರೆ. ಪ್ರಸಿದ್ಧ ಧಾರ್ಮಿಕ ಯಾತ್ರಾ ಸ್ಥಳವಾದ ಮಲೆ ಮಹದೇಶ್ವರ ಸ್ವಾಮಿ ದೇವಾಲಯದಲ್ಲಿ ಭೀಮನ ಅಮಾವಾಸ್ಯೆಯ ಪ್ರಯುಕ್ತವಾಗಿ ಮಾದೇಶ್ವರ ಸ್ವಾಮಿಗೆ ವಿಷೇಶ ಪೂಜಾ ಕಾರ್ಯಕ್ರಮಗಳು ನೆರವೇರಿದವು. ಬೇಡಗಂಪಣ ವಿಧಿ ವಿದಾನಗಳಲ್ಲಿ ಸರಧಿ ಸಾಲಿನ ಅರ್ಚಕರಿಂದ ಸ್ವಾಮಿಗೆ ವಿಷೇಶ ಪೂಜೆಯನ್ನು ನೆವೇರಿಸಿದ ನಂತರ ಭಕ್ತರ ಸರ್ವ ಧರ್ಶನಕ್ಕೆ ಅನುವು ಮಾಡಿಕೊಡಲಾಯಿತು. ಭೀಮನ ಅಮಾವಾಸ್ಯೆ ಪ್ರಯುಕ್ತ ಮಂಗಳವಾರದಂದು ಮಹದೇಶ್ವರ ಸ್ವಾಮಿಗೆ ಸರಗೂರು ಶರಣಯ್ಯ ವಂಶಸ್ಥರು ಎಣ್ಣೆ ಮಜ್ಜನ ಸೇವೆ ನೆರವೇರಿಸಿದರು. ಬೇಡಗಂಪಣ ಅರ್ಚಕರು ಸಾಂಪ್ರಾದಾಯಿಕ ವಿಶೇಷ ಪೂಜೆ ಸಲ್ಲಿಸಿ ಮಹದೇಶ್ವರನ ಲಿಂಗಕ್ಕೆ ಮಹಾ ಮಜ್ಜನ ನೆರವೇರಿಸಿ ಗಂಧಾಭಿಷೇಕ, ಬಿಲ್ವಾರ್ಚನೆ, ಕುಂಕುಮಾರ್ಚನೆ ಮಾಡಲಾಯಿತು. ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದಲ್ಲಿ ಭೀಮನ ಅಮಾವಾಸ್ಯೆ ಮಲೆ ಮಾದಪ್ಪನ ಸನ್ನಿಧಿ ಗರ್ಭಗುಡಿ ದರ್ಶನ ಒಳಾಂಗಣ ದೇವಾಲಯದ ಸುತ್ತಲು ವಿವಿಧ ಬಗೆಯ ಬಣ್ಣ ಬಣ್ಣದ ಹೂಗಳಿಂದ ಕಂಗೊಳಿಸುವಂತೆ ಅಲಂಕಾರ ಮಾಡಿ ಭಕ್ತಾದಿಗಳ ಕಣ್ಮಣ ಸೆಳೆಯುವಂತಿದೆ. ರೋಸ್ ರಮೇಶ್ ಎಂಬವರು 15 ಲಕ್ಷ ರೂ. ವೆಚ್ಚದಲ್ಲಿ 1 ಲಾರಿ ಹೂವುಗಳಿಂದ ಪುಷ್ಪಲಂಕಾರ ಮಾಡಿಸಿ ಸೇವೆ ಸಲ್ಲಿಸಿದ್ದಾರೆ.

### ಅಕ್ರಮ ಲೇಔಟ್‌ಗಳಿಗೆ ಕಡಿವಾಣ ಹಾಕಲು ಪಿಡಿಓಗಳಿಗೆ ಅಧಿಕಾರ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬಂಗಾರಪೇಟೆ

ತಾಲ್ಲೂಕಿನ ನಾನಾ ಗ್ರಾಮಗಳಲ್ಲಿ ಅಕ್ರಮ ಲೇಔಟ್‌ಗಳು ನಿರ್ಮಾಣವಾಗುತ್ತಿದೆ,ಬಡವರು ತಿಳಿಯದೆ ಹಣ ಕೊಟ್ಟು ಮೋಸಹೋಗುತ್ತಿದ್ದಾರೆ ಇದನ್ನ ತಪ್ಪಿಸುವ ಸಲುವಾಗಿ ಕಠಿಣ ಕ್ರಮಗಳನ್ನ ಕೈಗೊಳ್ಳವಂತೆ ಪಿಡಿಓಗಳಿಗೆ ಸೂಚಿಸಲಾಗಿದೆ ಎಂದು ಶಾಸಕ ಎಸ್.ಎನ್.ನಾರಾಯಣಸ್ವಾಮಿ ಹೇಳಿದರು.

ನಗರದ ನಗರಸಭೆಯ ಡಾ.ಬಿ.ಆರ್.ಅಂಬೇಡ್ಕರ್ ಸಭಾಂಗಣದಲ್ಲಿ ಆಡಳಿತ ಅಧಿಕಾರಿಗಳ ತಾಲ್ಲೂಕು ಪಂಚಾಯ್ತಿ ಪಿಡಿಓಗಳ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳ ಬರಗಾಲ,ಕುಡಿಯುವ ನೀರಿನ ಸಮಸ್ಯೆಯ ಸಭೆಯನ್ನು ಉದ್ದೇಶಿಸಿ ಮಾತನಾಡಿ,ನಗರವ್ಯಾಪ್ತಿಯ ಮತ್ತು ಪಂಚಾಯ್ತಿವ್ಯಾಪ್ತಿಯಲ್ಲಿ ಕುಡಿಯುವ ನೀರು ಸರ್ವಾಜನಿಕರಿಗೆ ತೊಂದರೆಯಾಗದಂತೆ ಯಾವ ರೀತಿ ಸರಬರಾಜು ಮಾಡಬೇಕು,ಎಲ್ಲೆಲ್ಲಿ ವ್ಯಾತ್ಯಸವಾದರೆ ಯಾವ ರೀತಿಯಲ್ಲಿ ಕ್ರಮತಗೋಬೇಕು ಎಂದು ವಿಶೇಷವಾಗಿ ಪಿಡಿಓಗಳಿಗೆ ಮತ್ತು ಆಡಳಿತ ಅಧಿಕಾರಿಗಳಿಗೆ ಸೂಚಿಸಲಾಯ್ತು.

ಯಾವುದೇ ಗ್ರಾಮದಲ್ಲೂ ಸಹ ಕುಡಿಯುವ ನೀರಿನ ಸಮಸ್ಯೆ ಬರಬಾರದು,ಒಂದು ವೇಳೆ ಸಮಸ್ಯೆ ಬಂದರೆ ತಕ್ಷಣ ನಾವುಗಳು ಸ್ವಂದಿಸುತ್ತೇವೆ.ಅನಾಧಿಕೃತವಾಗಿ ಲೇಔಟ್ ಮಾಡುವವರ ವಿರುದ್ಧ ಕ್ರಮಕೈಗೊಳ್ಳುವಂತೆ ಆಯಾ ಪಂ.ವ್ಯಾಪ್ತಿಯ ಪಿಡಿಓಗಳಿಗೆ ಅಧಿಕಾರವನ್ನು ಕೋಟ್ಟಿದ್ದೀನಿ. ಪಂಚಾಯ್ತಿವ್ಯಾಪ್ತಿಯಲ್ಲಿನ ಯಾವ ಯಾವ ಗ್ರಾಮಗಳಲ್ಲಿ ಯಾರು ಯಾರು ಕಂದಾಯ ಪಾವತಿಸಿಲ್ಲ ಅಂತವರಿಂದ ಕಂದಾಯ ಕಟ್ಟಿಸಿಕೊಳ್ಳಿ ಎಂಬ ವಿಚಾರವನ್ನ ಚರ್ಚೆ ಮಾಡಲಾಯ್ತು. ಸರ್ಕಾರದ ಯೋಜನೆಗಳನ್ನ ಮನೆ ಬಾಗಿಲಿಗೆ ತಲುಪಿಸುವಂತ ಕಾರ್ಯ ಈ ಯುವಸೈನ್ಯದಾಗಿರುತ್ತದೆ.

### ನ್ಯಾಯ ದೊರಕುವವರೆಗೂ ಹೋರಾಟ ಖಚಿತ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೆಜಿಎಫ್

ತಾಲ್ಲೂಕು ವ್ಯವಸಾಯೋತ್ಪನ್ನಗಳ ಮಾರಾಟ ಸಹಕಾರ ಸಂಘದ ಮುಖ್ಯಕಾರ್ಯನಿರ್ವಾಹಣಾಧಿಕಾರಿ ರಾಜೇಶ್ ಹಾಗೂ ನಿರ್ದೇಶಕರು ಶೇರುದಾರರನ್ನು ಅನರ್ಹಗೊಳಿಸಿದ್ದಾರೆ ಎಂದು ಸದಸ್ಯರ ಪರವಾಗಿ ಸುಧಾಕರ್,ವೇಮನರೆಡ್ಡಿ ಹಾಗೂ ಶೇರುದಾರರುಆರೋಪಿಸಿದರು. ಸಂಘದ ಕಚೇರಿಗೆ ಆಗಮಿಸಿದ ಮಾತನಾಡಿದ ಅವರು, ನಮ್ಮ ಸದಸ್ಯತ್ವವನ್ನು ಅನರ್ಹಗೊಳಿಸಿದ್ದಾರೆ ನಮಗೆ ನ್ಯಾಯ ದೊರಕುವವರೆಗೂ ಹೋರಾಟ ಮಾಡುತ್ತೇವೆ ಎಂದು ಹೇಳಿದರು.

ಶೇರುದಾರರನ್ನು ಕರಡು ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆ ಎಂದು ನೋಟಿಸ್‌ನ್ನು ರಿಜಿಸ್ಟಾರ್ ಪೋಸ್ಟ್‌ನಲ್ಲಿ ಕಳುಹಿಸಿದ್ದಾರೆ.ಆದರೆ ಏಕೆ ಹಿಂದೆ ಸಭೆಯ ಮಾಹಿತಿಯನ್ನು ರಿಜಿಸ್ಟಾರ್ ಪೋಸ್ಟ್ ಮೂಲಕ ಕಳುಹಿಸಲಿಲ್ಲ ಎಂದು ಪ್ರಶ್ನಿಸಿದರು. ಸಂಘ ಪ್ರಾರಂಭವಾದ ದಿನದಿಂದ ಇಂದಿನವರೆಗೂ ಯಾವುದೇ ಅಭಿವೃದ್ಧಿಯನ್ನು ಕಂಡಿಲ್ಲ.

ಇಷ್ಟು ದೊಡ್ಡ ಸಂಖ್ಯೆಯಲ್ಲಿ ಅನರ್ಹಗೊಳಿಸಿರುವುದರ ಹಿಂದಿನ ಉದ್ದೇಶವೇನು ಮುಂದೆ ನಾವು ನ್ಯಾಯಕ್ಕಾಗಿ ನ್ಯಾಯಾಲಯದಲ್ಲೂ ಹೋರಾಟವನ್ನು ಮಾಡುತ್ತೇವೆ ಎಂದು ಹೇಳಿದರು. ಈ ವೇಳೆ ಅಭಿಲಾಷರೆಡ್ಡಿ, ಮುನಿಸ್ವಾಮಿರೆಡ್ಡಿ ಹಾಗೂ ಇತರರು ಹಾಜರಿದ್ದರು.

# ಜಾನುವಾರುಗಳಿಗೆ ಮೇವಿನ ಸಮಸ್ಯೆ ಎದುರಾಗದಂತೆ ಮುನ್ನೆಚ್ಚರಿಕೆ ವಹಿಸಿ: ಕೃಷ್ಣಮೂರ್ತಿ

## ಕೃಷಿ ಹಾಗೂ ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ರೈತರ ಬಳಿಗೆ ತೆರಳಿ ಅವರ ಸಮಸ್ಯೆಗಳನ್ನು ಆಲಿಸಬೇಕು

• ಉದಯವಾಹಿನಿ, ಕೊಳ್ಳೇಗಾಲ

ಬರ ಪರಿಸ್ಥಿತಿಯಲ್ಲಿ ತಾಲ್ಲೂಕಿನ ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಅಧಿಕಾರಿಗಳು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಶಾಸಕ ಎ.ಆರ್. ಕೃಷ್ಣಮೂರ್ತಿ ಅಧಿಕಾರಿಗಳಿಗೆ ಸೂಚಿಸಿದರು. ಕೊಳ್ಳೇಗಾಲ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ಟಾಸ್ಕ್‌ಫೋರ್ಸ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗ್ರಾಮಗಳಲ್ಲಿ ಬೋರ್‌ವೆಲ್ ನೀರು, ಕಾವೇರಿ ನೀರು ಹಾಗೂ ಆರೊ ಪ್ಲಾಂಟ್‌ಗಳ ಸ್ಥಿತಿಗತಿಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ಪಂಚಾಯಿತಿ ಆಡಳಿತಾಧಿಕಾರಿಗಳು ಹಾಗೂ ಪಿಡಿಒಗಳು ತಮ್ಮ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಿಗೆ ನಿಯಮಿತವಾಗಿ ಭೇಟಿ ನೀಡಿ ಅಲ್ಲಿನ ಕುಡಿಯುವ ನೀರು ಸೇರಿದಂತೆ, ಜಾನುವಾರುಗಳಿಗೆ ಮೇವಿನ ಸಮಸ್ಯೆ ಎದುರಾಗದಂತೆ, ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿ, ಕೂಡಲೇ ಪರಿಹರಿಸಬೇಕು.

ಕೆಲವು ಪಿಡಿಒಗಳು ಹಾಗೂ ಆಡಳಿತಾಧಿಕಾರಿಗಳು ಪಂಚಾಯಿತಿಗಳಿಗೆ ಸರಿಯಾಗಿ ಬರುತ್ತಿಲ್ಲ ಎಂಬ ದೂರುಗಳು ಬಂದಿದ್ದು, ಅಧಿಕಾರಿಗಳು ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಬಾರದು ಎಂದು ಶಾಸಕರು ಎಚ್ಚರಿಸಿದರು.

ಪಿಡಿಒಗಳು ಕಡ್ಡಾಯವಾಗಿ ಮೂಮೆಂಟ್ ರಿಜಿಸ್ಟರ್ ನಿರ್ವಹಿಸಬೇಕು. ಗ್ರಾಮಗಳಲ್ಲಿ ನೀರಿನ ಸಮಸ್ಯೆ ಕಂಡುಬಂದರೆ ತಕ್ಷಣವೇ ಮೇಲಧಿಕಾರಿಗಳ ಗಮನಕ್ಕೆ ತಂದು ಪರಿಹಾರ ಕಲ್ಪಿಸಬೇಕು ಎಂದು ಸೂಚಿಸಿದರು. ತಾಲ್ಲೂಕಿನಲ್ಲಿ 1,000ಕ್ಕೂ ಹೆಚ್ಚು ನೀರಿನ ಮೀಟರ್‌ಗಳು ಕಳುವಾಗಿರುವ ವಿಚಾರ ಸಭೆಯಲ್ಲಿ ಪ್ರಸ್ತಾಪವಾಗಿದ್ದು, ಈ ಕುರಿತು ಪೊಲೀಸ್ ಇಲಾಖೆಗೆ ದೂರು ನೀಡಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.


ಉದಯವಾಹಿನಿ ಚಿತ್ರ

1 ಕುಡಿಯುವ ನೀರು ಸೇರಿದಂತೆ
2 ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷ್ಯ
3 ಕೃಷಿ ಹಾಗೂ ತೋಟಗಾರಿಕೆ

ಕೃಷಿ ಹಾಗೂ ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ರೈತರ ಬಳಿಗೆ ತೆರಳಿ ಅವರ ಸಮಸ್ಯೆಗಳನ್ನು ಆಲಿಸಬೇಕು. ಯಾವುದೇ ರೀತಿಯ ತೊಂದರೆ ಅಥವಾ ದೂರುಗಳು ಬಾರದಂತೆ ಅಧಿಕಾರಿಗಳು ಸ್ಥಳದಲ್ಲಿಯೇ ಸಮಸ್ಯೆಗಳನ್ನು ಪರಿಹರಿಸಬೇಕು ಎಂದು ಶಾಸಕರು ತಿಳಿಸಿದರು. ಸಭೆಯಲ್ಲಿ ಕೆಲವು ಪಿಡಿಒಗಳು ತಮ್ಮ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಯಾವುದೇ ಸಮಸ್ಯೆ ಇಲ್ಲ ಎಂದು ತಿಳಿಸಿದರೆ, ಇನ್ನು ಕೆಲವು ಪಿಡಿಒಗಳು ಮೋಟಾರ್ ದುರಸ್ತಿ ಸೇರಿದಂತೆ ವಿವಿಧ ಸಮಸ್ಯೆಗಳ ಬಗ್ಗೆ ಮಾಹಿತಿ ನೀಡಿದರು. ಅದೇ ರೀತಿ ಒಳಮೀಸಲಾತಿಗೆ ಸಂಬಂಧಿಸಿದ ಜಾತಿ ಪ್ರಮಾಣಪತ್ರಗಳನ್ನು ಅರ್ಹರಿಗೆ ತ್ವರಿತವಾಗಿ ನೀಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ಸಭೆಯಲ್ಲಿ ತಹಶೀಲ್ದಾರ ಬಸವರಾಜು, ತಾಲ್ಲೂಕು ಪಂಚಾಯಿತಿ ಇಒ ಕುಮಾರ್, ಕೊಳ್ಳೇಗಾಲ ಗ್ಯಾರಂಟಿ ಯೋಜನೆ ಅಧ್ಯಕ್ಷ ರಾಜೇಂದ್ರ, ಯಳಂದೂರು ಗ್ಯಾರಂಟಿ ಯೋಜನೆ ಅಧ್ಯಕ್ಷ ಚಂದ್ರು, ಬಿಇಒ ಮಂಜುಳಾ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ,ಗ್ರಾಮ ಪಂಚಾಯಿತಿ ಪಿಡಿಒಗಳು ಉಪಸ್ಥಿತರಿದ್ದರು.

ಮುಖ್ಯಮಂತ್ರಿ ಅವರು ನೀಡಿರುವ ನಿರ್ದೇಶನಗಳನ್ನು ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಿ, ಸರ್ಕಾರದ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ತಲುಪುವಂತೆ ನೋಡಿಕೊಳ್ಳಬೇಕು. ರೈತರು ಸಾರ್ವಜನಿಕರಿಂದ ಯಾವುದೇ ದೂರು ಬಾರದಂತೆ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು -ಶಾಸಕ ಎ.ಆರ್. ಕೃಷ್ಣಮೂರ್ತಿ

**ಜನರಿಗೆ ಸಮರ್ಪಕವಾಗಿ ನೀರು ಪೂರೈಕೆ**

ಸತ್ತೇಗಾಲ ಹಾಗೂ ಜಾಗೇರಿ ಭಾಗಗಳಲ್ಲಿ ನೀರಿನ ಸಮಸ್ಯೆ ಇದೆ ಎಂಬ ವಿಚಾರವೂ ಸಭೆಯಲ್ಲಿ ಪ್ರಸ್ತಾಪವಾಯಿತು. ನಗರಸಭೆಯ ಕುಡಿಯುವ ನೀರು ಯೋಜನೆಯ ಹೆಸರಿನಲ್ಲಿ ಕೇವಲ 2 ರಿಂದ 3 ಗಂಟೆಗಳ ಕಾಲ ನೀರು ಪೂರೈಕೆ ಮಾಡುತ್ತಿರುವುದು ಸರಿಯೇ ಎಂದು ಶಾಸಕರು ಪ್ರಶ್ನಿಸಿ, ಜನರಿಗೆ ಸಮರ್ಪಕವಾಗಿ ನೀರು ಪೂರೈಕೆ ಮಾಡುವಂತೆ ಸೂಚಿಸಿದರು.

## ಬರದ ನಡುವೆ 12 ಕ್ವಿಂಟಾಲ್ ಗೋಡಂಬಿ ಬೆಳೆದ ದಂಪತಿ; 4 ಎಕರೆಯಲ್ಲಿ ವೈವಿಧ್ಯಮಯ ಬೆಳೆ

• ಉದಯವಾಹಿನಿ, ಶಿಡ್ಲಘಟ್ಟ

ಒಂದೇ ಬೆಳೆಯ ಮೇಲೆ ನಂಬಿಕೆ ಇಡುವುದಕ್ಕಿಂತ, ಇರುವ ನೀರಿಗೆ ತಕ್ಕಂತೆ ಹಲವು ಬೆಳೆಗಳನ್ನು ಬೆಳೆಸಿಕೊಂಡರೆ ಕೃಷಿಯಲ್ಲಿನ ಅಪಾಯವನ್ನು ಕಡಿಮೆ ಮಾಡಬಹುದು. ಒಂದು ಬೆಳೆ ಕೈಕೊಟ್ಟರೂ ಮತ್ತೊಂದು ಬೆಳೆ ಕೈಹಿಡಿಯುತ್ತದೆ. ನೀರಿನ ಸದ್ಬಳಕೆ, ಬೆಳೆ ವೈವಿಧ್ಯ ಮತ್ತು ನಮ್ಮ ಶ್ರಮವೇ ಬರದ ನಡುವೆಯೂ ತೋಟವನ್ನು ಉಳಿಸಿಕೊಳ್ಳಲು ನೆರವಾಗಿವೆ ಎಂದು ತಮ್ಮ ಕೃಷಿ ಅನುಭವದಿಂದ ಹೇಳುತ್ತಾರೆ ಶಿಡ್ಲಘಟ್ಟ ತಾಲ್ಲೂಕಿನ ಗುಡಿಹಳ್ಳಿಯ ರೈತ ನಾಗರಾಜ್.ನಾಲ್ಕು ಎಕರೆಯಲ್ಲಿ ಹಣ್ಣು, ತರಕಾರಿ, ಹೂವು, ಸಾಂಬಾರ ಬೆಳೆಗಳ ಜತೆಗೆ ಕುರಿ ಸಾಕಾಣಿಕೆಯನ್ನೂ ಸಮನ್ವಯಗೊಳಿಸಿಕೊಂಡಿರುವ ನಾಗರಾಜ್-ಚನ್ನಕೃಷ್ಣಮ್ಮ ದಂಪತಿ, ಲಭ್ಯವಿರುವ ನೀರು ಮತ್ತು ಸಂಪನ್ಮೂಲಗಳಲ್ಲೇ ಕೃಷಿಯ ಹಲವು ಸಾಧ್ಯತೆಗಳನ್ನು ಕಂಡುಕೊಂಡಿದ್ದಾರೆ. ತೋಟದ ಕೆಲಸದಿಂದ ಹಿಡಿದು ಕೃಷಿ ಉಪಕರಣಗಳ ತಯಾರಿಕೆ, ನಿರ್ವಹಣೆಯವರೆಗೆ ಸಾಧ್ಯವಾದಷ್ಟು ಸ್ವಾವಲಂಬಿಯಾಗಿ ಬದುಕು ಕಟ್ಟಿಕೊಂಡಿದ್ದಾರೆ.

ಬರದ ವರ್ಷಗಳಲ್ಲಿ ಕೃಷಿ ಎಂದರೆ ನೀರಿನ ಲೆಕ್ಕಾಚಾರ, ಬೆಳೆ ಆಯ್ಕೆಯ ಗೊಂದಲ ಮತ್ತು ಆದಾಯದ ಅನಿಶ್ಚಿತತೆ. ಆದರೆ ತಾಲ್ಲೂಕಿನ ಗುಡಿಹಳ್ಳಿಯ ನಾಗರಾಜ್ ಮತ್ತು ಚನ್ನಕೃಷ್ಣಮ್ಮ ದಂಪತಿಯ ನಾಲ್ಕು ಎಕರೆ ತೋಟಕ್ಕೆ ಕಾಲಿಟ್ಟರೆ ಚಿತ್ರವೇ ಬೇರೆ. ಒಂದೇ ಬೆಳೆಯನ್ನು ನೆಚ್ಚಿಕೊಂಡಿರುವ ಜಮೀನಿನ ಬದಲು, ಹಣ್ಣು, ತರಕಾರಿ, ಹೂವು, ಸಾಂಬಾರ ಪದಾರ್ಥ, ಮೇವು ಹಾಗೂ ಪಶುಸಾಕಣೆಯನ್ನು ಕೃಷಿ ವ್ಯವಸ್ಥೆ ಇಲ್ಲಿ ಕಾಣಿಸುತ್ತದೆ.

## ಸಚಿವ ನಾಗೇಂದ್ರ ರಾಜಿನಾಮೆ ಪಡೆಯುವಂತೆ ಸಿಎಂಗೆ ಬಿಜೆಪಿ ಆಗ್ರಹ

• ಉದಯವಾಹಿನಿ, ರಾಮನಗರ

ಭ್ರಷ್ಟಾಚಾರದಲ್ಲಿ ಭಾಗಿಯಾಗಿರುವ ವ್ಯಕ್ತಿಗೆ ಮತ್ತೆ ಸಚಿವ ಸ್ಥಾನ ನೀಡಿರುವುದು ಇಡಿ ರಾಜ್ಯದ ಜನಕ್ಕೆ ಮಾಡಿರುವ ಅವಮಾನವಾಗಿದ್ದು ಕೂಡಲೆ ಸಚಿವ ನಾಗೇಂದ್ರ ಅವರಿಂದ ರಾಜೀನಾಮೆ ಪಡೆಯಬೇಕೆಂದು ಬಿಜೆಪಿ ಮುಖಂಡ ಗೌತಂಗೌಡ ಒತ್ತಾಯಿಸಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಗೇಂದ್ರ ಅವರು ಮಂತ್ರಿಗಳಾಗಿದ್ದ ಸಂದರ್ಭದಲ್ಲಿ 187 ಕೋಟಿ ಹಗರಣ ನಡೆದಿದ್ದು ಇದೆ ಕಾರಣಕ್ಕೆ ಅವರು ರಾಜೀನಾಮೆ ನೀಡಿದ್ದರು.

ಇದು ತನಿಖೆ ಹಂತದಲ್ಲಿರುವಾಗಲೇ ಅವರಿಗೆ ಮತ್ತೆ ಸಚಿವ ಸ್ಥಾನ ನೀಡಿರುವುದನ್ನು ನೋಡಿದರೆ ಭ್ರಷ್ಟಾಚಾರದಿಂದ ಪಡೆದ ಹಣಕ್ಕೆ ಕಾಂಗ್ರೆಸ್ ಹೈಕಮಾಂಡ್ ನಾಗೇಂದ್ರ ಅವರಿಗೆ ಕಪ್ಪಾ ನೀಡುತ್ತಿದೆಯೇ ಎಂಬ ಅನುಮಾನ ಮೂಡುತ್ತಿದೆ ಎಂದರು. ನಾಗೇಂದ್ರ ಅವರ ರಾಜೀನಾಮೆ ಪಡೆಯುವವರೆಗೆ ಸದನದ ಹೊರಗೆ ಮತ್ತು ಒಳಗೆ ಬಿಜೆಪಿ ಹೋರಾಟ ನಡೆಸಲಿದೆ ಎಂದರು.



ಉದಯವಾಹಿನಿ ಚಿತ್ರ

ಬಿಜೆಪಿ ಜಿಲ್ಲಾಧ್ಯಕ್ಷ ಆನಂದಸ್ವಾಮಿ ಮಾತನಾಡಿ, ಮಾಜಿ ಸಿಎಂ ಸಿದ್ದರಾಮಯ್ಯ ಅವರೆ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಭ್ರಷ್ಟಾಚಾರವನ್ನು ಸದನದಲ್ಲಿಯೇ ಒಪ್ಪಿಕೊಂಡು ರಾಜೀನಾಮೆ ಪಡೆದಿದ್ದರು. ಇಂತಹವರಿಗೆ ಮತ್ತೆ ಮಂತ್ರಿ ಸ್ಥಾನ ನೀಡುವುದಾದರೆ ಜನಕ್ಕೆ ಯಾವ ಸಂದೇಶ ನೀಡಿದ್ದಾರೆ. ಅಲ್ಲದೆ ವಾಲ್ಮೀಕಿ ನಿಗಮದ ಹಗರಣದಲ್ಲಿ ಮುಖ್ಯಮಂತ್ರಿ ಡಿಕೆಶಿ ಅವರಿಗೂ ಪಾಲು ಬಂದಿದೆ ಎಂಬುದು ಜಗತ್ ಜಾಹೀರಾಗಿದೆ ಎಂದು ಆರೋಪಿಸಿದರು.

ಪ್ರಮುಖರಾದ ಪ್ರಸಾದ್ ಗೌಡ, ಸುರೇಶ್, ಕಾಳಯ್ಯ, ಚಂದ್ರಶೇಖರ್, ನಾಗೇಶ್, ಪ್ರವೀಣ್, ರುದ್ರದೇವರು ಇದ್ದರು.

## ಕಾವೇರಿ ವಿಚಾರಕ್ಕೆ ವಿನೂತನ ಪ್ರತಿಭಟನೆ: ಕೈಕಟ್ಟಿ, ಬಾಯಿ ಮುಚ್ಚಿ 'ನಿದ್ರೆ' ಮೂಲಕ ಆಕ್ರೋಶ

• ಉದಯವಾಹಿನಿ, ಗುಂಡ್ಲುಪೇಟೆ

ಕಾವೇರಿ ನೀರಿನ ವಿಚಾರದಲ್ಲಿ ತಮಿಳುನಾಡು ಸರ್ಕಾರ ನಿರಂತರವಾಗಿ ಕ್ಯಾತೆ ತೆಗೆಯುತ್ತಿದೆ ಎಂದು ಆರೋಪಿಸಿ ಕರ್ನಾಟಕ ಕಾವಲು ಪಡೆಯ ವತಿಯಿಂದ ಗುರುವಾರ ಗುಂಡ್ಲುಪೇಟೆ ಪಟ್ಟಣದ ಸರ್ಕಾರಿ ಬಸ್ ನಿಲ್ದಾಣದ ಮುಂಭಾಗ ವಿನೂತನ ಪ್ರತಿಭಟನೆ ನಡೆಸಲಾಯಿತು. ಕೈಕಟ್ಟಿ, ಬಾಯಿ ಮುಚ್ಚಿಕೊಂಡು 'ನಿದ್ರೆ' ಮಾಡುವ ಮೂಲಕ ವಿಭಿನ್ನ ರೀತಿಯಲ್ಲಿ ಪ್ರತಿಭಟನೆ ನಡೆಸಿ ದಿಕ್ಕಾರ ಘೋಷಣೆಗಳನ್ನ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕಾವೇರಿ ವಿಚಾರದಲ್ಲಿ ರಾಜ್ಯ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಂಡು ರಾಜ್ಯದ ರೈತರು ಹಾಗೂ ಸಾರ್ವಜನಿಕರ ಹಿತ ಕಾಪಾಡಬೇಕು ಎಂದು ಕಾವಲು ಪಡೆಯ ತಾಲ್ಲೂಕು ಅಧ್ಯಕ್ಷ ಎ. ಅಬ್ದುಲ್ ಮಾಲಿಕ್ ಆಗ್ರಹಿಸಿದರು. ಮಾನವ ಬಂಧುತ್ವ ವೇದಿಕೆ ಜಿಲ್ಲಾ ಸಂಚಾಲಕ ಮಾಡ್ರಹಳ್ಳಿ ಸುಭಾಷ್ ಕಾವೇರಿ ಪ್ರಾಧಿಕಾರದ ನಿಲುವನ್ನ ಖಂಡಿಸಿದರು.


ಉದಯವಾಹಿನಿ ಚಿತ್ರ

ಕರವೇ ಜಿಲ್ಲಾ ಕಾರ್ಯದರ್ಶಿ ರಿಯಾಜ್ ಪಾಷ, ಕಾವಲು ಪಡೆಯ ತಾಲ್ಲೂಕು ಕಾರ್ಯದರ್ಶಿ ಎಸ್. ಮುಬಾರಕ್ ಸೇರಿದಂತೆ ಹಲವು ಮುಖಂಡರು ಮಾತನಾಡಿ ಹೋರಾಟದ ನಿಲುವು ವ್ಯಕ್ತಪಡಿಸಿದರು. ವನ್ಯಜೀವಿ ಸಂರಕ್ಷಣಾ ಸಮಿತಿ ತಾಲೂಕು ಅಧ್ಯಕ್ಷ ಪಿ. ಬಾಲು ಹೋರಾಟಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ನಂತರ ಊಟಿಮೈಸೂರು ಹೆದ್ದಾರಿಯಲ್ಲಿ ಮೌನ ಮೆರವಣಿಗೆ ನಡೆಸಿ ತಾಲ್ಲೂಕು ಕಚೇರಿಗೆ ತೆರಳಿ ತಾಲೂಕು ದಂಡಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಕಾವಲು ಪಡೆಯ ಜಿಲ್ಲಾ ಕಾರ್ಯಾಧ್ಯಕ್ಷ ಅಬ್ದುಲ್ ರಷೀದ್, ತಾಲ್ಲೂಕು ಗೌರವಾಧ್ಯಕ್ಷ ರಾಮೇಗೌಡ, ಉಪಾಧ್ಯಕ್ಷ ಆರ್. ಮಂಜುನಾಥ್, ಶಿವಕುಮಾರ್, ಸಂಚಾಲಕ ಕುಂಜುಟ್ಟಿ, ಟೌನ್ ಅಧ್ಯಕ್ಷ ಸಾದಿಕ್ ಪಾಷ, ಗೌರವಾಧ್ಯಕ್ಷ ಶಕೀಲ್, ಸಂಚಾಲಕ ಮಿಮಿಕ್ರಿ ರಾಜು ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಮಂಡ್ಯ, ರಾಮನಗರದಲ್ಲಿ ಪ್ರತಿಭಟನೆಯ ಕಾವು

• ಉದಯವಾಹಿನಿ, ಮಂಡ್ಯ

ಮಂಡ್ಯ ನಗರದಲ್ಲಿ ಬಂದ್‌ಗೆ ಉತ್ತಮ ಬೆಂಬಲ ವ್ಯಕ್ತವಾಗಿದೆ. ನಗರದ ಪ್ರಮುಖ ವಹಿವಾಟು ಕೇಂದ್ರವಾಗಿರುವ ಪೇಟೆ ಬೀದಿಯ ಬಹುತೇಕ ಅಂಗಡಿ-ಮುಂಗಟ್ಟುಗಳನ್ನು ಸ್ವಯಂಪ್ರೇರಿತವಾಗಿ ಮುಚ್ಚಿ ವರ್ತಕರು ಬೆಂಬಲ ಸೂಚಿಸಿದರು.

ಕನ್ನಡ ಸೇನೆಯ ಕಾರ್ಯಕರ್ತರು ನಗರದ ಸಂಜಯ್ ವೃತ್ತದಲ್ಲಿ ಖಾಲಿ ಮಡಿಕೆ ಹಾಗೂ ಹುರುಳಿ ಕಾಳು ಹಿಡಿದು ''ಖಾಲಿ ಕೊಡ ಭಾಗ್ಯ ಕೊಟ್ಟ ಸರ್ಕಾರ ಎಂದು ಸರ್ಕಾರದ ವಿರುದ್ಧ ವ್ಯಂಗ್ಯವಾಡಿ ಖಾಲಿ ಮಡಿಕೆ ಚಳವಳಿ' ನಡೆಸಿದರು. ಸಾರ್ವಜನಿಕರು ಹಾಗೂ ವರ್ತಕರಲ್ಲಿ ಬಂದ್‌ಗೆ ಬೆಂಬಲ ಕೋರಿ ಕನ್ನಡಪರ ಕಾರ್ಯಕರ್ತರು ನಗರಾದ್ಯಂತ ಬೈಕ್ ರ‍್ಯಾಲಿ ನಡೆಸಿದರು. ರಾಮನಗರ ಬಂದ್ ಬೆಂಬಲಿಸಿ ಪ್ರತಿಭಟನೆ ನಡೆಸಿದ ಕನ್ನಡಪರ ಹೋರಾಟಗಾರರು ಬೆಂಗಳೂರು-ಮೈಸೂರು ಹಳೆಯ ಹೆದ್ದಾರಿಯನ್ನು ತಡೆಯಲು ಯತ್ನಿಸಿದರು. ಈ ವೇಳೆ ಮುಂಜಾಗ್ರತಾ ಕ್ರಮವಾಗಿ ಪೊಲೀಸರು ಹೋರಾಟಗಾರರನ್ನು ವಶಕ್ಕೆ ಪಡೆದರು. ರಾಮನಗರದ ಪ್ರಮುಖ ಐಜೂರು ವೃತ್ತದಲ್ಲಿ ಜಮಾಯಿಸಿದ ಕಾರ್ಯಕರ್ತರು ಖಾಲಿ ಬಿಂದಿಗೆಗಳನ್ನು ಹಿಡಿದು ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ಹೊರಹಾಕಿದರು. ಮೈಸೂರು ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಬಂದ್‌ಗೆ ನಿರೀಕ್ಷಿತ ಮಟ್ಟದ ಬೆಂಬಲ ವ್ಯಕ್ತವಾಗಿಲ್ಲ. ಕೆಎಸ್‌ಆರ್‌ಟಿಸಿ ಹಾಗೂ ನಗರ ಸಾರಿಗೆ ಬಸ್‌ಗಳು ಎಂದಿನಂತೆ ಸಂಚರಿಸಿದ್ದು, ಸಾರ್ವಜನಿಕ ಓಡಾಟಕ್ಕೆ ಯಾವುದೇ ಅಡಚಣೆಯಾಗಲಿಲ್ಲ. ನಗರದಲ್ಲಿ ಪ್ರತಿಭಟನೆಗೆ ಇಳಿದ ಕನ್ನಡ ಸಂಘಟನೆಗಳ ಪ್ರಮುಖ ಕಾರ್ಯಕರ್ತರನ್ನು ಪೊಲೀಸರು ಮುಂಜಾಗ್ರತಾ ಕ್ರಮವಾಗಿ ವಶಕ್ಕೆ ಪಡೆದರು. ಹಾಸನ ಜಿಲ್ಲೆಯಲ್ಲಿ ವ್ಯಾಪಾರ-ವಹಿವಾಟು ಹಾಗೂ ಸಾರ್ವಜನಿಕ ಜನಜೀವನ ಎಂದಿನಂತಿತ್ತು.

## ಮೈಸೂರಲ್ಲಿ ಪ್ರತಿಭಟನೆಗೆ ಸೀಮಿತವಾದ ಕರ್ನಾಟಕ ಬಂದ್: ಮಂಡ್ಯದಲ್ಲಿ ಬಹುತೇಕ ಯಶಸ್ವಿ

• ಉದಯವಾಹಿನಿ, ಮೈಸೂರು

ತಮಿಳುನಾಡಿಗೆ ಪ್ರತಿನಿತ್ಯ 12 ಸಾವಿರ ಕ್ಯುಸೆಕ್ಸ್ ಕಾವೇರಿ ನೀರು ಹರಿಸುವಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ನೀಡಿರುವ ಆದೇಶದ ವಿರುದ್ಧ ಕರ್ನಾಟಕ ಬಂದ್‌ಗೆ ಕರೆ ಕೊಡಲಾಗಿದೆ. ಆದರೆ ಹಲವಾರು ಸಂಘಟನೆಗಳು ನೈತಿಕ ಬೆಂಬಲ ಅಷ್ಟೇ ಕೊಟ್ಟಿದ್ದು, ಮಂಡ್ಯದಲ್ಲಿ ಬಂದ್‌ಗೆ ಉತ್ತಮ ಪ್ರತಿಕ್ರಿಯೆ ಇದ್ದರೂ, ಮೈಸೂರಲ್ಲಿ ಪರಿಸ್ಥಿತಿ ಸಹಜವಾಗಿದ್ದು, ಜನರ ಓಡಾಟ-ಅಂಗಡಿ ಮುಂಗಟ್ಟುಗಳೂ ತೆರೆದಿವೆ. ಮೈಸೂರಿಂದ ಬೇರೆ ಬೇರೆ ಊರುಗಳಿಗೆ ಸಂಪರ್ಕ ಇರುವ ಮೈಸೂರು ಗ್ರಾಮಾಂತರ ಬಸ್ ನಿಲ್ದಾಣದ ಬಳಿ ಪ್ರತಿಭಟನೆಗಳು ನಡೆಯುತ್ತಿವೆ. ಆದರೆ ಬಸ್‌ಗಳ ಸಂಚಾರ ಎಂದಿನಂತೆ ಇವೆ. ಮಳೆ ಬಂದು ಜಲಾಶಯದಲ್ಲಿ ನೀರು ತುಂಬಿದ್ದರಿಂದ ಅನೇಕ ಸಂಘಟನೆಗಳು ಬಂದ್ ನಿಂದ ಹಿಂದೆ ಸರಿದಿವೆ. ಪೊಲೀಸರು ಮುಂಜಾಗ್ರತೆ ಕ್ರಮವಾಗಿ ಬಿಗಿ ಬಂದೋಬಸ್ತ್ ವಹಿಸಿದ್ದಾರೆ. ರಾಜ್ಯ ರೈತ ಸಂಘಟನೆ ಹಾಗೂ ಕನ್ನಡಪರ ಸಂಘಟನೆಗಳು ಪ್ರತಿಭಟನೆ ನಡೆಯುತ್ತಿದೆ. ಆದರೆ ಹೋಟೆಲ್, ವರ್ತಕರ ಸಂಘ ಹಾಗೂ ಕಾರ್ಮಿಕರು, ಆಟೋ-ಕ್ಯಾಬ್ ಚಾಲಕರ ಸಂಘದಿಂದ ನೈತಿಕ ಬೆಂಬಲ ಮಾತ್ರ ಕೊಡಲಾಗಿದೆ.

ಮೊದಲು ಕಾಲುವೆಗಳಿಗೆ ನೀರು ಹರಿಸಿ ಎಂದು ಕನ್ನಡ ಸಂಘಟನೆಗಳು ಮನವಿ ಮಾಡಿದೆ.

ರಾಜ್ಯಸರಕಾರ ಪ್ರತಿಭಟನೆ ಹತ್ತಿಕ್ಕುವ ಕೆಲಸ ಮಾಡುತ್ತಿದೆ. ಮಹಾದಾಯಿ, ಮೇಕೆದಾಟು, ಕಳಸಾ ಬಂಡೂರಿ ಯೋಜನೆ ಈ ಎಲ್ಲಾ ಯೋಜನೆ ಆಗ್ರಹಿಸಿ ಬಂದ್ ಮಾಡಲಾಗುತ್ತಿದೆ.

# ತಾಲ್ಲೂಕು ಕಚೇರಿಯಲ್ಲಿ ಮಧ್ಯವರ್ತಿಗಳ ಹಾವಳಿ ತಪ್ಪಬೇಕು: ಮಂಜು

## ಪಟ್ಟಣದ ತಾಲ್ಲೂಕು ಕಛೇರಿಯಲ್ಲಿ ಮದ್ಯವರ್ತಿಗಳ ಹಾವಳಿ ಬಗ್ಗೆ ಸಾರ್ವಜನಿಕ ದೂರುಗಳು ಕೇಳಿ ಬರುತ್ತಿವೆ

• ಉದಯವಾಹಿನಿ, ಕೆ.ಆರ್.ಪೇಟೆ.

ಸಾರ್ವಜನಿಕರ ಕುಂದು ಕೊರತೆಗಳನ್ನು ಆಲಿಸಿ ಅದಕ್ಕೆ ಪರಿಹಾರೋಪಾಯಗಳನ್ನು ಕಂಡುಕೊಳ್ಳುವ ಸದುದ್ದೇಶದಿಂದ ತಾಲ್ಲೂಕು ಕಛೇರಿಯಲ್ಲಿ ಪ್ರತಿ ಬುಧವಾರ ಮದ್ಯಾಹ್ನ 03 ಘಂಟೆಗೆ ಸಾರ್ವಜನಿಕರ ಕುಂದುಕೊರತೆಗಳ ಅಹವಾಲು ಸಭೆ ನಡೆಸಲಾಗುತ್ತಿದೆ ಎಂದು ಶಾಸಕ ಹೆಚ್.ಟಿ.ಮಂಜು ತಿಳಿಸಿದರು.

ಪಟ್ಟಣದ ತಾಲ್ಲೂಕು ಆಡಳಿತ ಸೌಧದಲ್ಲಿರುವ ಕಂದಾಯ ಇಲಾಖೆಯ ಸಭಾಂಗಣದಲ್ಲಿ ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿ ಅವರು ಮಾತನಾಡಿದರು.

ಪ್ರತಿ ಬುಧವಾರ ಸಾರ್ವಜನಿಕರ ಕುಂದು ಕೊರತೆಯ ಸಭೆ ನಿರಂತರವಾಗಿ ನಡೆಯಲಿದೆ. ವಿಧಾನ ಸಭೆಯ ಅಧಿವೇಶನದ ಸಂದರ್ಭವನ್ನು ಹೊರತುಪಡಿಸಿ ಮಿಕ್ಕೆಲ್ಲ ಅವಧಿಯಲ್ಲಿ ಬುಧವಾರದ ಸಭೆ ಇನ್ನು ಮುಂದೆ ನಿರಂತರವಾಗಿ ನಡೆಯಲಿದೆ. ಸರ್ಕಾರಿ ಕಛೇರಿಗಳು ಜನಸ್ನೇಹಿಯಾಗಿ ಕೆಲಸ ಮಾಡಬೇಕು. ಸಾರ್ವಜನಿಕರ ಅರ್ಜಿಗಳನ್ನು ವಿಲೇ ಮಾಡುವ ಸಂದರ್ಭದಲ್ಲಿ ಮದ್ಯವರ್ತಿಗಳಿಗೆ ಅವಕಾಶ ಇರಬಾರದು. ಆದರೆ ಪಟ್ಟಣದ ತಾಲ್ಲೂಕು ಕಛೇರಿಯಲ್ಲಿ ಮದ್ಯವರ್ತಿಗಳ ಹಾವಳಿ ಬಗ್ಗೆ ಸಾರ್ವಜನಿಕ ದೂರುಗಳು ಕೇಳಿ ಬರುತ್ತಿವೆ. ಕಛೇರಿಯ ಸಿಬ್ಬಂಧಿಗಳೇ ಭ್ರಷ್ಟಾಚಾರವನ್ನು ಪ್ರಶ್ನಿಸುವವರ ವಿರುದ್ಧ ಹಾಗೂ ತಮ್ಮ ಪರವಾಗಿ ಪ್ರತಿಭಟನೆ ಮಾಡಲು ಕೆಲವರಿಗೆ ಅಗತ್ಯ ಕುಮ್ಮಕ್ಕು ನೀಡುತ್ತಿದ್ದಾರೆ. ತಾಲ್ಲೂಕು ಕಛೇರಿಯ ಪರ ಮತ್ತು ವಿರುದ್ಧ ಚಳುವಳಿಗಳು ನಡೆದಿದ್ದು ಇದು ಕಂದಾಯ ಇಲಾಖೆಗೆ ಶೋಭೆ ತರುವುದಿಲ್ಲ. ಸಾರ್ವಜನಿಕರ ಕೆಲಸ ವೇಳೆಯಲ್ಲಿ ಕೆಲವರು ಟೀ ಅಂಗಡಿ ಹೋಗುವುದು, ಟೀ ಅಂಗಡಿಯಲ್ಲಿ ಸಾರ್ವಜನಿಕರ ಅರ್ಜಿಗಳನ್ನು ಪರಿಶೀಲಿಸುತ್ತಿರುವ ವೀಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ಮತ್ತು ಕೆಲವು ಪತ್ರಿಕೆಗಳಲ್ಲಿ ವರದಿಯಾಗಿದೆ. ಕರ್ತವ್ಯದ ಅವಧಿಯಲ್ಲಿ ನೌಕರರು ಹೊರಹೋಗುವುದಾದರೆ ಅವರು ಯಾವಕಾರಣಕ್ಕಾಗಿ ಹೊರಹೋಗಿದ್ದಾರೆನ್ನುವುದನ್ನು ಕಛೇರಿಯ ಮೂಮೆಂಟ್ ರಿಜಿಸ್ಟರ್‌ನಲ್ಲಿ ದಾಖಲಿಸಬೇಕು. ಕಳಂಕಿತ ನೌಕರರ ಅಗತ್ಯ ನಮ್ಮ ತಾಲ್ಲೂಕಿಗಿಲ್ಲ ಎಂದು ಎಚ್ಚರಿಸಿದ ಶಾಸಕ ಹೆಚ್.ಟಿ.ಮಂಜು ಕಂದಾಯ ಇಲಾಖೆಯ ಬಗ್ಗೆ ಕೇಳಿಬರುತ್ತಿರುವ ದೂರುಗಳು ನಿಲ್ಲಬೇಕು. ಇದರ ಬಗ್ಗೆ ತಹಸೀಲ್ದಾರರು ಕ್ರಮ ವಹಿಸುವಂತೆ ಸೂಚಿಸಿದರು.ಸರ್ಕಾರಿ ಆಸ್ತಿ ರಕ್ಷಣೆಗೆ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮವಹಿಸಬೇಕು. ತಾಲ್ಲೂಕಿನ ದೊಡ್ಡಗಾಡಿನಹಳ್ಳಿ ಗ್ರಾಮದಲ್ಲಿ ವ್ಯಕ್ತಿಯೊಬ್ಬರು ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿ ಮರಗಿಡಗಳನ್ನು ಕಡಿದು ತೆಂಗಿನ ಸಸಿಗಳನ್ನು ನೆಟ್ಟಿದ್ದಾರೆ.


ಉದಯವಾಹಿನಿ ಚಿತ್ರ

ಸದರಿ ಬಾವಿಯಿರುವ ಜಾಗ ಕಂದಾಯ ಇಲಾಖೆಯ ವ್ಯಾಪ್ತಿಗೆ ಸೇರುತ್ತದೆ ಎಂದು ಅಲ್ಲಿನ ಪಿ.ಡಿ.ಓ ಹಿಂಬರಹ ಕೊಟ್ಟಿದ್ದರೂ ಕಂದಾಯ ಇಲಾಖೆ ಸಾರ್ವಜನಿಕ ಆಸ್ತಿಯ ರಕ್ಷಣೆಗೆ ಕ್ರಮ ವಹಿಸಿಲ್ಲ. ಸರ್ಕಾರಿ ಆಸ್ತಿಯ ರಕ್ಷಣೆಗೆ ಕಟ್ಟುನಿಟ್ಟಿನ ಕ್ರಮವಹಿಸುವಂತೆ ಸೂಚಿಸಿದರು.- ಶಾಸಕ ಹೆಚ್.ಟಿ.ಮಂಜು

**ಅರ್ಜಿಗಳನ್ನು ಪರಿಶೀಲನೆ**

ಪ್ರತಿ ಬುಧವಾರ ನಾನು ಮಾಡುವ ಸಭೆಯಿಂದ ಸಾರ್ವಜನಿಕರ ಸಮಸ್ಯೆಗಳು ತಕ್ಷಣವೇ ಬಗೆಹರಿಯುವುದಿಲ್ಲ. ಪ್ರತಿ ಸಭೆಯಲ್ಲಿ ಬಂದ ಅರ್ಜಿಗಳನ್ನು ಪರಿಶೀಲನೆ ಮಾಡಿ ಅವುಗಳನ್ನು ಬಗೆಹರಿಸುವ ಪ್ರಯತ್ನ ಆರಂಭಿಸಿದ್ದೇನೆ. ಇಂದಿನ ಸಭೆಯಲ್ಲಿ ಬಂದ ಅರ್ಜಿಗಳ ಬಗ್ಗೆ ಏನಾಗಿದೆ ಎನ್ನುವುದರ ಮಾಹಿತಿಯನ್ನು ಕಛೇರಿಯ ಸಿಬ್ಬಂಧಿಗಳು ಮುಂದಿನ ಸಭೆಯಲ್ಲಿ ನೀಡಬೇಕು.

ಅಂತರಾಳದಿಂದ...
EDITORIAL

# ಸರಕು ಸಾಗಣೆಗೆ ಹೊಸ ನಿಯಮ: ರಸ್ತೆ ಸುರಕ್ಷೆಗೆ ಬಲ



ಎಲ್ಲಾ ತೆರನಾದ ಸರಕು ಸಾಗಣೆಯ ವಾಹನಗಳು ಸಾಗಣೆಯ ಸಂದರ್ಭದಲ್ಲಿ ಸರಕುಗಳನ್ನು ಕಡ್ಡಾಯವಾಗಿ ಸಂಪೂರ್ಣವಾಗಿ ಮುಚ್ಚಬೇಕು ಎಂಬ ಹೊಸ ನಿಯಮವನ್ನು ಕೇಂದ್ರ ಸರ್ಕಾರ ರೂಪಿಸಿದೆ. ಮುಂದಿನ ವರ್ಷದ ಎಪ್ರಿಲ್ 1 ರಿಂದ ಈ ಹೊಸ ನಿಯಮ ದೇಶಾದ್ಯಂತ ಅನ್ವಯವಾಗಲಿದ್ದು, ವಾಹನ ಸವಾರರ ಅದರಲ್ಲೂ ರಸ್ತೆ ಬಳಕೆದಾರರ ಬಲುದಿನಗಳ ಬೇಡಿಕೆಗೆ ಕೊನೆಗೂ ಕೇಂದ್ರ ಸರ್ಕಾರ ಸ್ಪಂದಿಸಿದಂತಾಗಿದೆ. ಮರಳು, ಜಲ್ಲಿ ಸಹಿತ ವಿವಿಧ ಸರಕುಗಳನ್ನು ಸಾಗಾಟ ಮಾಡುವ ಸಂದರ್ಭದಲ್ಲಿ ಇವು ರಸ್ತೆಯುದ್ದಕ್ಕೂ ಚೆಲ್ಲಿ ವಾಹನಗಳ ಸುಗಮ ಸಂಚಾರಕ್ಕೆ ತಡೆಯಾಗುತ್ತಿರುವುದಲ್ಲದೆ ಹಲವಾರು ಬಾರಿ ವಾಹನ ಸವಾರರ ಪ್ರಾಣಕ್ಕೂ ಕುತ್ತು ತರುತ್ತಿದೆ. ಸರಕು ಸಾಗಣೆ ವಾಹನಗಳಿಂದ ಎದುರಾಗುತ್ತಿರುವ ಸಮಸ್ಯೆಗಳ ಕುರಿತಂತೆ ಕಳೆದ ಕೆಲವು ದಶಕಗಳಿಂದ ಸರಕಾರದ ಗಮನ ಸೆಳೆಯುತ್ತ ಬರಲಾಗಿತ್ತು. ಈ ಹಿನ್ನೆಲೆಯಲ್ಲಿ ಸಾರಿಗೆ ಇಲಾಖೆ ಸರಕುಗಳನ್ನು ಸಾಗಿಸುವ ಸಂದರ್ಭದಲ್ಲಿ ಅವುಗಳನ್ನು ಮುಚ್ಚಬೇಕು ಎಂಬ ನಿಯಮವನ್ನು ಜಾರಿಗೆ ತಂದಿತ್ತಾದರೂ ಅದನ್ನು ಅಷ್ಟೊಂದು ಪರಿಣಾಮಕಾರಿಯಾಗಿ ಜಾರಿಗೆ ತರಲಾಗಿರಲಿಲ್ಲ. ಇನ್ನು ಸರಕು ಸಾಗಣೆ ವಾಹನ ಮಾಲೀಕರು ಮತ್ತು ಚಾಲಕರು ಹೆಚ್ಚಿನ ಆಸ್ಥೆ ವಹಿಸದೆ ಹಳೆಯ ಬಟ್ಟೆ, ಪ್ಲಾಸ್ಟಿಕ್, ಟರ್ಪಾಲ್‌ಗಳಿಂದ ಬೇಕಾಬಿಟ್ಟಿಯಾಗಿ ಮುಚ್ಚಿ ಹಗ್ಗದಿಂದ ಕಟ್ಟಿ ಸರಕುಗಳನ್ನು ಸಾಗಿಸುವುದು ಮಾಮೂಲಿಯಾಗಿದೆ. ಈ ಬಗ್ಗೆ ಆಗೊಮ್ಮೆ ಈಗೊಮ್ಮೆ ಎಂಬಂತೆ ಸಾರಿಗೆ ಅಧಿಕಾರಿಗಳು ಮತ್ತು ಪೊಲೀಸರು ಕಾರ್ಯಾಚರಣೆ ನಡೆಸಿದರೂ ಸರಕು ಸಾಗಣೆ ವಾಹನ ಮಾಲಕರು ಮತ್ತು ಸಂಸ್ಥೆಗಳ ಈ ಬೇಜವಾಬ್ದಾರಿ ಧೋರಣೆ ಮುಂದುವರಿದಿತ್ತು. ಇದರಿಂದಾಗಿ ಹೆದ್ದಾರಿ ಆದಿಯಾಗಿ ಬಹುತೇಕ ರಸ್ತೆಗಳಲ್ಲಿ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿರುವುದೇ ಅಲ್ಲದೆ ಅಪಘಾತಗಳು ಸಂಭವಿಸಿದ ಹಲವಾರು ನಿದರ್ಶನಗಳಿವೆ. ಇಂತಹ ಅಪಘಾತಗಳಲ್ಲಿ ಹಲವು ಅಮಾಯಕ ಜೀವಗಳು ತಮ್ಮ ಪ್ರಾಣವನ್ನು ಕಳೆದುಕೊಂಡಿವೆ.

> **ಈಗ ಕೇಂದ್ರ ಸರ್ಕಾರದ ಸಾರಿಗೆ ಇಲಾಖೆ ದೇಶದಲ್ಲಿನ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸುವ ಜತೆಯಲ್ಲಿ ಹೆಚ್ಚುತ್ತಿರುವ ರಸ್ತೆ ಅಪಘಾತಗಳು ಮತ್ತು ಅವುಗಳಿಂದಾಗುತ್ತಿರುವ ಪ್ರಾಣಹಾನಿಗೆ ಕಡಿವಾಣ ಹಾಕಲು ಮುಂದಾಗಿದೆ. ಈಗಾಗಲೇ ರಸ್ತೆ ಸುರಕ್ಷೆ ಮತ್ತು ಅಪಘಾತ ನಿಯಂತ್ರಣ ನಿಯಮಾವಳಿಗಳನ್ನು ಬಿಗಿಗೊಳಿಸಿರುವ ಇಲಾಖೆ ಇದರ ಮುಂದುವರಿದ ಭಾಗವಾಗಿ ಸರಕು ಸಾಗಣೆ ವಾಹನಗಳ ಬೇಕಾಬಿಟ್ಟಿ ಸಂಚಾರಕ್ಕೆ ಲಗಾಮು ತೊಡಿಸಲು ಮುಂದಾಗಿದೆ. ಕೇಂದ್ರದ ಮೋಟಾರು ವಾಹನಗಳ ಈಗಾಗಲೇ ರಸ್ತೆ ಸುರಕ್ಷೆ ಮತ್ತು ಅಪಘಾತ ನಿಯಮಗಳು-2026ರಡಿಯಲ್ಲಿ ಹೊಸ ನಿಯಮಗಳನ್ನು ಸೇರ್ಪಡೆಗೊಳಿಸಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಆದೇಶ ಹೊರಡಿಸಿದೆ.**

ಈ ಹೊಸ ಆದೇಶದಂತೆ ಲಾರಿ, ಟಿಪ್ಪರ್, ಡಂಪರ್‌ಗಳ ಸಹಿತ ಸರಕು ಸಾಗಣೆ ವಾಹನಗಳು ಸರಕು ಸಾಗಣೆಯ ಭಾಗವನ್ನು ಮೇಲ್ಭಾಗದಿಂದ ಸಂಪೂರ್ಣವಾಗಿ ಮುಚ್ಚಿಕೊಳ್ಳುವ ವ್ಯವಸ್ಥೆಯನ್ನು ಕಡ್ಡಾಯವಾಗಿ ಅಳವಡಿಸಬೇಕು. ಸ್ವಯಂಚಾಲಿತ ಇಲ್ಲವೇ ಎಲೆಕ್ಟ್ರಿಕ್, ಹೈಡ್ರಾಲಿಕ್ ಅಥವಾ ಇನ್ನಾವುದೇ ಅತ್ಯಾಧುನಿಕ ಮುಚ್ಚಳ ವ್ಯವಸ್ಥೆಯನ್ನು ಹೊಂದಿರುವ ಯಾಂತ್ರೀಕೃತ ವ್ಯವಸ್ಥೆಯ ಅಳವಡಿಕೆಯನ್ನು ಕಡ್ಡಾಯಗೊಳಿಸಲಾಗಿದೆ. ಈ ವ್ಯವಸ್ಥೆಗಳು ಮತ್ತು ಇತರ ಸುರಕ್ಷಾ ಸಾಧನಗಳ ಎತ್ತರವನ್ನು ವಾಹನಗಳ ಅಧಿಕೃತ ಎತ್ತರದ ಮಿತಿಗೆ ಪರಿಗಣಿಸದಿರಲು ಇಲಾಖೆ ತೀರ್ಮಾನಿಸಿದ್ದು, ಈ ಮೂಲಕ ಸರಕು ಸಾಗಣೆ ವಾಹನಗಳ ಮಾಲಕರು ಮತ್ತು ಸಂಸ್ಥೆಗಳ ಬೇಡಿಕೆಗೂ ಸ್ಪಂದಿಸಿದೆ. ಒಟ್ಟಿನಲ್ಲಿ ಸಾರಿಗೆ ಇಲಾಖೆ ರಸ್ತೆ ಬಳಕೆದಾರರ ದಶಕಗಳ ಬೇಡಿಕೆಗೆ ಸಕಾರಾತ್ಮಕ ವಾಗಿ ಪರಿಗಣಿಸಿದ್ದು, ಈ ಹೊಸ ನಿಯಮಾವಳಿಯನ್ನು ಪ್ರತಿಯೊಂದು ಸರಕು ಸಾಗಣೆ ವಾಹನವೂ ಪಾಲಿಸುವುದನ್ನು ಖಾತರಿಪಡಿಸಿಕೊಳ್ಳಬೇಕು. ಇಲ್ಲವಾದಲ್ಲಿ ಇದು ಕೂಡ ಹಾಲಿ ನಿಯಮದಂತೆ ಕಡತದಲ್ಲಿಯೇ ಉಳಿಯಲಿದೆ.




• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ದೇವ, ಇದು ನೀನರಿಯದುದೇ? ನಿನಗಿಂತಲೂ ಬಲಿಷ್ಠರಾದವರು ಇದ್ದಾರೆಯೇ? ಹಾಗಾಗಿ ಚಿಂತೆಯನ್ನು ಬಿಟ್ಟು ತ್ವರಿತವಾಗಿ ಭೂಮಿತನೂಜೆಯನ್ನು ಅನುಭವಿಸಿ ಸಂತೋಷಗೊಳ್ಳುವುದೇ ಲೇಸು ಎಂದು ಹೇಳಿದ. ''ಸೀತೆಯೆಂದು ಹಿಂದುಮುಂದೆ ಯೋಚಿಸಲೇಕೆ, ಚರಣಾಯುಧದ ರೀತಿಯಲ್ಲಿ ಕಾಮಕಾತರತೆಯನ್ನು ಶಮನಗೊಳಿಸಿಕೊಳ್ಳುವುದು, ಅದಾದ ಮೇಲೆ ಏನೇ ಎದುರಾದರೂ ಗೆಲ್ಲಬಹುದು ಘಟಕರ್ಣ ಇಂದ್ರಜಿತು ಮುಂತಾದ ಮಹಾಬಲರು ಇಂದ್ರನನ್ನೂ ಎಣಿಸಿದಂತಹವರು. ಇನ್ನು ಈ ನರರ ಪಾಡೇನು? ದೈತ್ಯವರ್ಯಾ, ಕೈಗೆ ಸಿಕ್ಕಿರುವ ಪದಾರ್ಥವನ್ನು ಬಿಡುತ್ತಾರೆಯೇ? ಮನದಿಷ್ಟವು ನೆರವೇರಿದ ಬಳಿಕ ಏನೇ ಆದರೂ ಅದನ್ನೆಲ್ಲ ಎದುರಿಸಬೇಕು; ಅದರ ಬದಲು ವಿನಯದಿಂದ ಎಷಮಗೊಳ್ಳುತ್ತದೆ. ಆದ್ದರಿಂದ ಸಂದೇಹವನ್ನುಳಿದು ವನಿತೆಯನ್ನು ರಮಿಸು ಎಂದು ರಕ್ಕಸನು ಆ ಬೋಧಿಸಿದ. ಆಗ ದಶಶಿರನು ತನ್ನ ಚಿತ್ತದ ಅನುತಾಪದ ಕಾರಣವನ್ನು ಹೇಳಿಕೊಂಡ: ''ಹಿಂದೆ ನಾನು ತಾತನಾದ ಬ್ರಹ್ಮದೇವನ ಮನಗೆ ಹೋಗುತ್ತಿರುವಾಗ ಸುಖವನ್ನು ಒದಗಿಸುವ ಪುಂಜಿಕಸ್ಥಲೆ ಎಂಬ ಅಪ್ಸರೆಯನ್ನು ನೋಡಿದೆ; ಆಕಾಶಮಾರ್ಗದಲ್ಲಿ ಜಾಜ್ವಲ್ಯಮಾನವಾದ ಅಗ್ನಿಜ್ವಾಲೆಯಂತಿದ್ದ ಅವಳನ್ನು ಮದನಬಲದಿಂದ ಹಿಡಿದು ವಿವಸ್ತ್ರಗೊಳಿಸಿ ರಮಿಸಿ ಮುಂದಕ್ಕೆ ಸಾಗಿದೆ; ಅದನ್ನು ತಿಳಿದ ಸಾರಸಭವನು, ''ಇದೇ ಮೊದಲು, ಇದೇ ಕೊನೆ; ಮುಂದೆ ಎಂದಾದರೂ ಯಾವುದೇ ಹೆಣ್ಣನ್ನು ಬಲವಂತದಿಂದ ಭೋಗಿಸಿದೆಯಾದರೆ ನಿನ್ನ ತಲೆಯು ನೂರು ಹೋಳಾಗುತ್ತದೆ' ಎಂದು ಶಾಪವಿತ್ತ. ಜಲಜಪೀಠನ ಶಾಪದ ಭಯದಿಂದ ನಾನು ಸುಮನಿದ್ದೇನೆ, ಸೀತೆಯನ್ನು ಒಲಿಸಿಕೊಳ್ಳಲು ಎಷ್ಟೇ ಪ್ರಯತ್ನಿಸಿ ನೋಡಿದರೂ ಆಕೆ ನೆಲವನ್ನು ನಿಟ್ಟಿಸುವಳೇ ಹೊರತು ನನ್ನ ಕಡೆ ದೃಷ್ಟಿಯನ್ನೇ ಹಾಯಿಸಳು. ಹೀಗಾಗಿ ನಾನು ಅವಳನ್ನು ಮುಟ್ಟದೆಯೇ ಒಲಿಸಿಕೊಳ್ಳಲು ಪ್ರಯತ್ನಿಸಿದೇನೇ ಹೊರತು ಮನುಷ್ಯನ ಭಯದಿಂದ ಅಲ್ಲ. ಅಯ್ಯೋ ಮರುಳೇ, ಈ ಜಗತ್ತಿನಲ್ಲಿ ಹರಭಕ್ತನಾದ ರಾವಣನನ್ನು ಯಾವನು ತಾನೇ ಎದುರಿಸಿ ಬಾಳುತ್ತಾನೆ? ಆದರೆ ನನ್ನ ಈ ಹೃತ್‌ಶಲ್ಯವು ಬ್ರಹ್ಮನಿಂದಾದುದು; ಹೀಗಾಗಿ ಒಲಿಸಿಕೊಂಡಲ್ಲದೆ ಹೆಣ್ಣುಗಳನ್ನು ಮುಟ್ಟಲಾಗದು; ಈ ರಹಸ್ಯವನ್ನು ನಾನು ಇದುವರೆಗೆ ಮತ್ತಾರೊಡನೆಯೂ ಹೇಳಿಕೊಂಡಿರಲಿಲ್ಲ; ನೀನು ಆಪ್ತನಾದ ಕಾರಣ ಇದನ್ನು ಹೇಳಿದೆ. ಮಾನವನ ಶೌರ್ಯಕ್ಕೆ ನಾನು ಹೆದರುತ್ತೇನೆಯೇ? ಮೊದಲು ಆ ನರಪಶುವನ್ನು ನನ್ನ ಬಾಣಗಳಿಂದ ತರಿದಿಡುತ್ತೇನೆ; ಆ ಬಳಿಕ ಈ ಪ್ರಮದೆಯನ್ನಾಕ್ರಮಿಸುತ್ತೇನೆ'' ಎಂದು ರಾವಣನು ಹಲ್ಲುಕಡಿದ. ದೈತ್ಯನ ಗರ್ಜನೆಯ ಪರಿಯನ್ನು ನೋಡಿ ಇತರ ರಕ್ಕಸರು ತಮಗೆ ತೋಚಿದಂತೆ ವೀರವಾಕ್ಯಗಳನ್ನಾಡುತ್ತಿದ್ದರು. ಇದನ್ನು ನೋಡಿ ಮರುಗಿದ ರಾಮಪುರವಾಸನ ಡಿಂಗರಿಗನೆನಿಸಿದ ವಿಭೀಷಣನು ಚಿಂತಿಸುತ್ತ ಮನಸಿನಲ್ಲಿಯೇ ಮರುಗುತ್ತ, ಇದಕ್ಕೇನು ಉಪಾಯವಿದೆ ಎಂದು ತನ್ನ ಮನಸ್ಸಿನಲ್ಲಿಯೇ ಆಲೋಚಿಸಿದ.

ಅದ್ರಿಜಾತೆಯೇ ಕೇಳು, ರಾವಣನು ಕಿಡಿಯುಗುಳುತ್ತ ಗರ್ಜಿಸಲು, ಜೊತೆಗೆ ಕುಂಭಕರ್ಣನು ಭೋರ್ಮೊರೆಯುತ್ತಿದ್ದ, ಇತರ ಅಸುರರೂ ಅಡಿಗಡಿಗೆ ಕೋಪದಿಂದ ಹಲುಬುತ್ತಿದ್ದುದನ್ನು ವಿಭೀಷಣನು ಕಂಡು ಮನಸ್ಸಿನಲ್ಲಿಯೇ ಮರುಗಿದ ಮಾತನಾಡದೆ ಸುಮ್ಮನೆ ಕುಳಿತುಕೊಳ್ಳಲಾರದೆ ಹಿತೋಕ್ತಿಗಳಿಂದ ತನ್ನ ಅಣ್ಣನನ್ನು ಒಡಂಬಡಿಸಬೇಕೆಂದು ನುಡಿಯತೊಡಗಿದ ಮಹಾರಾಜನೇ, ನನ್ನ ಬಿನ್ನಪವನ್ನು ಆಲಿಸು, ಸಾಮಾನ್ಯವಾಗಿ ಜನರು ಆಪ್ತರೆಂಬಂತೆ ಅತಿ ಮೃದುನುಡಿಗಳಿಂದ ಆಪ್ತವಚನವೆಂಬಂತೆ ಮಾತನಾಡಿ ಹೊಟ್ಟೆಹೊರೆದುಕೊಳ್ಳುತ್ತಾರೆ. ಆದರೆ ಮಹಾಪುರುಷರು ಯಜಮಾನನ ಸುರುಚಿರ ಕ್ಷೇಮವನ್ನು ಯೋಚಿಸುತ್ತ ನಿಷ್ಠುರವಚನಗಳನ್ನಾಡುತ್ತಾರೆ. ಆದರೆ ಅಂತಹವರು ಸಿಕ್ಕುವುದೂ ಇಲ್ಲ, ಅವರ ಮಾತುಗಳು ಕ್ಷೇಮಂಕರವೆಂದು ಭಾವಿಸುವವರೂ ಇಲ್ಲ. ಹಿಂದುಮುಂದರಿಯದ ಆಲೋಚನೆಗಳಿಂದ ಸಮಯಕ್ಕೆ ತಕ್ಕಂತೆ ಬಾಯಿಗೆ ಬಂದ ಹಾಗೆ ಮಾತನಾಡಿ ಯಜಮಾನನ ಪ್ರೀತಿಯನ್ನು ಗಳಿಸಿಕೊಂಡು ಸದಾ ಸುಖವನ್ನುಣ್ಣುವ ಕುಕ್ಷಿಂಭರಿಗಳು ಇರುತ್ತಾರೆ. ಅಂತಹ ಮಂದಮತಿಗಳ ಮಾತುಗಳಿಂದ ಸುಖಸಂತೋಷಗಳು ಬರುತ್ತವೆಯೇ? ಕಾಣಿಸದ ಹಾಗೆ ಗುಂಡಿಯಲ್ಲಿ ಕೆಡಹುವ ಜನರಲ್ಲದೆ ಅಂತಹವರಿಂದ ಕೊಂಚವೂ ಲೇಸು ಸಮನಿಸದು, ಮಹಾಪಭು. ಯಜಮಾನನ ಮನಸಿನ ರೀತಿಯನ್ನರಿತು ದೊಡ್ಡ ದೊಡ್ಡ ಮಾತುಗಳಿಂದ ಹೊಗಳುತ್ತ ಅನುಸರಿಸಿ ಸರಿಯಾದ ಸಮಯದಲ್ಲಿ ಪ್ರಿಯಕರವೆನಿಸುವ ಮಾತುಗಳನ್ನಾಡಿ ತನ್ನ ಸೌಖ್ಯ ಸಂಪಾದನೆ ಮಾಡುವವರೇ ಲೋಕದಲ್ಲಿ ಹೆಚ್ಚು ಕೊಂಚ ನಿಷ್ಠುರವಾದರೂ ಆಳುವವನಿಗೆ ಒಳಿತಾಗುವಂತೆ ಅಮಾತ್ಯರು ಮಾತುಗಳನ್ನಾಡುತ್ತಾರೆಯೇ? ಇದನ್ನರಿತು ನನ್ನ ನುಡಿಗಳಿಗೆ ಕಿವಿಗೊಡು. ಪರಮಾರ್ಥದ ಆಂತರ್ಯವನ್ನು ತಿಳಿದು ಪರಹಿತಚಿಂತನೆಯಲ್ಲಿ ತೊಗಿರುವವರು ಲೋಕದಲ್ಲಿ ದುರ್ಲಭ; ಮೂರ್ಯರೂ ವಂಚನಾಪರರೂ ಅಹಿತರ ಮಾತುಗಳನ್ನು ಕಡೆಗಣಿಸಿದರೆ ಸುಖವುಂಟಾಗುತ್ತದೆ.

ಮುಂದುವರೆಯುವುದು



ವಿದ್ಯಾರ್ಥಿ ವಿಜಯ

ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

52

# ಜ್ಞಾನದ ಜೊತೆಗಾರರು



ಬದುಕಿನ ಅತಿದೊಡ್ಡ ವಿಶ್ವವಿದ್ಯಾಲಯಕ್ಕೆ ಕಾಲಿಡುವ ವಿದ್ಯಾರ್ಥಿಗೆ ಪುಸ್ತಕಗಳಷ್ಟೇ ಅಲ್ಲ, ಜೊತೆಯಾಗಿ ನಡೆಯುವ ಹೃದಯಗಳೂ ಬೇಕು. ಏಕಾಂಗಿ ಶ್ರಮ ಒಂದು ದೀಪವಾದರೆ, ಗುಂಪು ಅಧ್ಯಯನವು ಸಾವಿರ ದೀಪಗಳ ಹಬ್ಬ. ಸರಿಯಾದ ಸ್ನೇಹಿತರ ಸತ್ಸಂಗದಲ್ಲಿ ನಡೆಯುವ ಈ ಜ್ಞಾನಯಾತ್ರೆಯೇ ಯಶಸ್ಸಿನ ಗುಟ್ಟು.

ಪ್ರತಿ ಗುಂಪೂ ಜ್ಞಾನದ ಜೊತೆಗಾರರ ಬಳಗವಾಗುವುದಿಲ್ಲ. ಗುರಿಯಿಲ್ಲದ ಚರ್ಚೆಯು ದಿಕ್ಕು ತಪ್ಪಿದ ಗಾಳಿಪಟದಂತೆ. ಆದ್ದರಿಂದ ಸಮಯ ನಿಗದಿ, ವಿಷಯ ಹಂಚಿಕೆ ಮತ್ತು ಪರಸ್ಪರ ಗೌರವ ಅನಿವಾರ್ಯ. ವ್ಯರ್ಥ ಮಾತಿಗೆ ಕಡಿವಾಣ ಹಾಕಿ, ಪ್ರತಿಯೊಬ್ಬರೂ ಬೋಧಕ ಮತ್ತು ವಿದ್ಯಾರ್ಥಿ ಎರಡೂ ಪಾತ್ರ ನಿರ್ವಹಿಸಿದಾಗ ಮಾತ್ರ ಗುಂಪು ಅಧ್ಯಯನ ಫಲ ನೀಡುತ್ತದೆ.

ಶಿಕ್ಷಕರೇ, ಪೋಷಕರೇ, ಇದನ್ನು ಮನಗಾಣಿ. ಗುಂಪು ಅಧ್ಯಯನವು ಅಂಕಗಳಾಚೆಗೂ ಬೆಳೆಯುತ್ತದೆ. ಇದು ಸಹಕಾರವನ್ನು ಕಲಿಸುತ್ತದೆ, ಸಂವಹನವನ್ನು ರೂಪಿಸುತ್ತದೆ, ನಾಯಕತ್ವವನ್ನು ಬೆಳೆಸುತ್ತದೆ ಮತ್ತು ಆತ್ಮವಿಶ್ವಾಸವನ್ನು ತುಂಬುತ್ತದೆ. ಒಳ್ಳೆಯ ಜ್ಞಾನದ ಜೊತೆಗಾರರು ದೊರೆತ ವಿದ್ಯಾರ್ಥಿಯು ಕೇವಲ ಪರೀಕ್ಷೆಯನ್ನು ಮಾತ್ರವಲ್ಲ, ಜೀವನದ ಪ್ರತಿಯೊಂದು ಮೆಟ್ಟಿಲನ್ನೂ ಗೆಲ್ಲುತ್ತಾನೆ.

> **ನರವಿಜ್ಞಾನ ಹೇಳುವ ಪ್ರಕಾರ, ನಾವು ಕಲಿತದ್ದನ್ನು ವಿವರಿಸಿದಾಗ ಮತ್ತು ಇತರರ ಪ್ರಶ್ನೆಗಳಿಗೆ ಉತ್ತರಿಸಿದಾಗ ಮಾಹಿತಿಯು ಮೆದುಳಿನಲ್ಲಿ ಆಳವಾಗಿ ಬೇರೂರುತ್ತದೆ. ಗುಂಪಿನಲ್ಲಿ ಒಬ್ಬರು ಪರಿಕಲ್ಪನೆಯನ್ನು ಬಿಚ್ಚಿಡುತ್ತಾರೆ, ಇನ್ನೊಬ್ಬರು ಸಂಶಯ ಎತ್ತುತ್ತಾರೆ, ಮತ್ತೊಬ್ಬರು ಹೊಸ ಉದಾಹರಣೆ ನೀಡುತ್ತಾರೆ.**
> **ಈ ಪರಸ್ಪರ ವಿನಿಮಯದಿಂದ ಒಂದೇ ವಿಷಯಕ್ಕೆ ನಾಲ್ಕು ಕಿಟಕಿಗಳು ತೆರೆದುಕೊಳ್ಳುತ್ತವೆ.**
> **ಹೀಗಾಗಿ ತಿಳುವಳಿಕೆ ವಿಸ್ತಾರವಾಗುತ್ತದೆ ಮತ್ತು ಸ್ಮರಣೆಯು ದೀರ್ಘಕಾಲ ಉಳಿದುಕೊಳ್ಳುತ್ತದೆ. ಏಕಾಂಗಿ ಓದಿಗಿಂತ ಚರ್ಚೆಯ ಮೂಲಕ ಕಲಿಯುವುದು ಶೇಕಡ 50 ರಷ್ಟು ಹೆಚ್ಚು ಪರಿಣಾಮಕಾರಿ ಎಂಬುದು ಸಂಶೋಧನೆಯ ತೀರ್ಮಾನ.**

# ವಿಶ್ವ ಅಂಗಾಂಗ ದಾನ ದಿನ 2026: ದೇಹದಲ್ಲಿನ ಯಾವ ಅಂಗಾಂಗಗಳನ್ನು ದಾನ ಮಾಡಬಹುದು?: ತಜ್ಞ ವೈದ್ಯರು ಹೇಳುವುದೇನು?

ಅಂಗಾಂಗ ದಾನದ ಬಗ್ಗೆ ಜಾಗೃತಿ ಮೂಡಿಸಲು ಪ್ರತಿವರ್ಷ ಆಗಸ್ಟ್ 13ರಂದು ವಿಶ್ವ ಅಂಗಾಂಗ ದಾನ ದಿನವನ್ನು ಆಚರಣೆ ಮಾಡಲಾಗುತ್ತದೆ. ಅಂಗಾಂಗ ದಾನವು ಅಗತ್ಯವಿರುವ ರೋಗಿಗೆ ಹೊಸ ಬದುಕನ್ನು ನೀಡಲು ಒಳ್ಳೆಯ ಮಾರ್ಗವಾಗಿದೆ. ದೇಶದಲ್ಲಿ ತೀವ್ರ ಅಂಗಾಂಗ ವೈಫಲ್ಯದಿಂದ ಸಾವಿರಾರು ರೋಗಿಗಳು ಕಸಿಗಾಗಿ ಕಾಯುತ್ತಿದ್ದಾರೆ. ವ್ಯಕ್ತಿಯ ಮರಣದ ಬಳಿಕ ದಾನ ಮಾಡಿದ ಅಂಗಗಳು ಇತರ ಅನೇಕರ ಜೀವಗಳನ್ನು ಉಳಿಸಲು ತುಂಬಾ ಸಹಾಯ ಮಾಡುತ್ತದೆ. ವಿಶ್ವ ಅಂಗಾಂಗ ದಾನ ದಿನದ ಅಧಿಕೃತ ಜಾಗತಿಕ ಧ್ಯೇಯವಾಕ್ಯವನ್ನು ಅಂತಾರಾಷ್ಟ್ರೀಯ ಆರೋಗ್ಯ ಸಂಸ್ಥೆಗಳು ಔಪಚಾರಿಕವಾಗಿ ಘೋಷಣೆ ಮಾಡಿಲ್ಲ. ಈ ದಿನದ ಆಚರಣೆಯು ಜನರಲ್ಲಿ ಜಾಗೃತಿ ಮೂಡಿಸುವುದು, ಸಾಮಾನ್ಯ ತಪ್ಪು ಕಲ್ಪನೆಗಳನ್ನು ಹೋಗಲಾಡಿಸುವುದು, ರೋಗಗಳ ಜೀವಗಳನ್ನು ಉಳಿಸಲು ಜನರು ತಮ್ಮ ಅಂಗಗಳನ್ನು ದಾನ ಮಾಡಲು ಪ್ರತಿಜ್ಞೆ ಮಾಡುವಂತೆ ಪ್ರೋತ್ಸಾಹಿಸುವುದರ ಮೇಲೆ ಕೇಂದ್ರೀಕರಿಸುತ್ತದೆ. ರೋಗಿಗಳು ಮತ್ತು ಅವರ ಕುಟುಂಬಗಳಿಗೆ ಅವರ ಸಹಾನುಭೂತಿ, ಸಮರ್ಪಣೆಯನ್ನು ಗೌರವಿಸುವ ಮೂಲಕ ಅಂಗಾಂಗ ದಾನ ಹಾಗೂ ಕಸಿಯಲ್ಲಿ ಮತ್ತಷ್ಟು ಪ್ರಗತಿಗೆ ಕ್ರಮಕ್ಕೆ ಅನುಗುಣವಾಗಿ ಕಾರ್ಯನಿರ್ವಹಿಸಲು ಭರವಸೆ ನೀಡುತ್ತದೆ.

ವೈದ್ಯರು ತಿಳಿಸುವ ಪ್ರಕಾರ, ಅಂಗಾಂಗ ದಾನದಲ್ಲಿ ಪ್ರಮುಖವಾಗಿ ಎರಡು ವಿಧಗಳಿವೆ. ಜೀವಂತ ಅಂಗಾಂಗ ದಾನ ಹಾಗೂ ಶವ ದಾನ. ಜೀವಂತ ದಾನದಲ್ಲಿ ದಾನಿ ಜೀವಂತವಾಗಿರುತ್ತಾನೆ. ಆದರೆ, ದಾನಿಯ ಮರಣಾನಂತರ ಶವ ದಾನ ಮಾಡಲಾಗುತ್ತದೆ.ಜೀವಂತ ದಾನಿಗಳು ಅಂದರೆ, ಮೂತ್ರಪಿಂಡಗಳು ಹಾಗೂ ಯಕೃತ್ತಿನ ಭಾಗಗಳಂತಹ ಅಂಗಗಳನ್ನು ದಾನ ಮಾಡಬಹುದಾದ ಅಂಗ ದಾನಿಗಳು, ವ್ಯಕ್ತಿಗಳು ಒಂದು ಮೂತ್ರಪಿಂಡದಿಂದ ಬದುಕ ಬಲ್ಲರು ಹಾಗೂ ಯಕೃತ್ತು ದೇಹದಲ್ಲಿ ಪುನರುತ್ಪಾದನೆಗೆ ಹೆಸರುವಾಸಿಯಾದ ಏಕೈಕ ಅಂಗವಾಗಿದೆ. ಇದು ದಾನಿ ಇನ್ನೂ ಜೀವಂತವಾಗಿರುವಾಗ ಈ ಅಂಗಗಳನ್ನು ಕಸಿ ಮಾಡಲು ಸಾಧ್ಯವಾಗಿಸುತ್ತದೆ ಎಂದು ವಿವರಿಸುತ್ತಾರೆ.

> **ವಿವಿಧ ಅಂಗಗಳ ಜೊತೆಗೆ ಕಣ್ಣಿನಲ್ಲಿರುವ ಕಾರ್ನಿಯಾಗಳು, ಚರ್ಮ, ಮೂಳೆಗಳು, ಹೃದಯ ಕವಾಟಗಳು, ರಕ್ತನಾಳಗಳು, ನರಗಳು ಹಾಗೂ ಸ್ನಾಯುರಜ್ಜುಗಳಂತಹ ಅಂಗಾಂಶಗಳನ್ನು ಕೂಡ ದಾನ ಮಾಡಬಹುದು. ಕಾರ್ನಿಯಲ್ ಕಸಿ ಮಾಡುವಿಕೆಯು ದೃಷ್ಟಿ ಪುನಃಸ್ಥಾಪಿಸಲು ತುಂಬಾ ಸಹಾಯ ಮಾಡುತ್ತದೆ. ಚರ್ಮವನ್ನು ತೀವ್ರವಾದ ಸುಟ್ಟಗಾಯಗಳು, ಗಾಯಗಳಿಗೆ ಚಿಕಿತ್ಸೆ ನೀಡಲು ಬಳಸಲಾಗುತ್ತದೆ ಎಂದು ಆರೋಗ್ಯ ತಜ್ಞರು ವಿವರಿಸುತ್ತಾರೆ. ಜೀವಂತ ವ್ಯಕ್ತಿ ಅಂಗಗಳನ್ನು ದಾನ ಮಾಡಲು ಸಾಧ್ಯವಿಲ್ಲ.**

ವಯಸ್ಸು, ಜಾತಿ, ಧರ್ಮದ ಭೇದವಿಲ್ಲದೆ ಯಾರಾದರೂ ಅಂಗಾಂಗ ದಾನ ಮಾಡಬಹುದು. ದಾನಿ ಆರೋಗ್ಯವಂತವಾಗಿರುವುದು ತುಂಬಾ ಮುಖ್ಯವಾಗುತ್ತದೆ. ಆಕಾಂಕ್ಷಿ ಅಂಗಾಂಗ ದಾನಿಗಳು ಎಚ್‌ಐವಿ, ಕ್ಯಾನ್ಸರ್, ಶ್ವಾಸಕೋಶ ಹಾಗೂ ಹೃದಯದ ಕಾಯಿಲೆಯಂತಹ ದೀರ್ಘಕಾಲದ ಕಾಯಿಲೆಗಳಿಂದ ಬಳಲುತ್ತಿಲ್ಲ ಎಂಬುದನ್ನು ಮೊದಲು ಖಚಿತ ಪಡಿಸಿಕೊಳ್ಳಬೇಕಾಗುತ್ತದೆ. ಮನುಷ್ಯ ನಿಜವಾಗಿ ಯಾವೆಲ್ಲಾ ಅಂಗಗಳನ್ನು ದಾನ ಮಾಡಬಹುದು ಎಂಬುದನ್ನು ತಿಳಿಯೋಣ.

ಮೃತ ದಾನಿಯ ಎರಡೂ ಶ್ವಾಸಕೋಶಗಳನ್ನು ದಾನ ಮಾಡಬಹುದು. ಕೆಲವು ಸಂದರ್ಭಗಳಲ್ಲಿ ಮಾತ್ರ ಶ್ವಾಸಕೋಶದ ಒಂದು ಭಾಗವನ್ನು ಸಹ ಜೀವಂತ ದಾನಿಯಿಂದ ದಾನ ಮಾಡಬಹುದು. ಮೃತಪಟ್ಟಿರುವ ದಾನಿ ಎರಡೂ ಕಿಡ್ನಿಗಳನ್ನು ದಾನ ಮಾಡಬಹುದು.



# ಭರತನಾಟ್ಯ ರಂಗಪ್ರವೇಶ

**ಬೆಂಗಳೂರು** : ವಿದುಷಿ ಶ್ರೀಮತಿ ವೀಣಾ ಗಂಗಾಧರ್ ಅವರ ಶಿಷ್ಯೆ ಕು. ಸ್ಫೂರ್ತಿ ಆರ್.ಎಸ್. ಅವರ ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮವು ಆಗಸ್ಟ್ 15, ಶನಿವಾರ ಸಂಜೆ 5-00 ಗಂಟೆಗೆ ನಗರದ ಜೆ.ಸಿ. ರಸ್ತೆಯಲ್ಲಿರುವ ಎ.ಡಿ.ಎ. ರಂಗಮಂದಿರದಲ್ಲಿ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಡಾ. ಆರ್. ವಿ. ರಾಘವೇಂದ್ರ, ಶ್ರೀ ಎಸ್. ನಂಜುಂಡರಾವ್ ಹಾಗೂ ಗುರು ವಿದುಷಿ ಶ್ರೀಮತಿ ಸೀತಾ ಗುರುಪ್ರಸಾದ್ ಭಾಗವಹಿಸಲಿದ್ದಾರೆ.

ನಟ್ಟುವಾಂಗದಲ್ಲಿ ವಿದುಷಿ ಶ್ರೀಮತಿ ವೀಣಾ ಗಂಗಾಧರ್, ಗಾಯನದಲ್ಲಿ ವಿದ್ವಾನ್ ಶ್ರೀ ಬಾಲಸುಬ್ರಹ್ಮಣ್ಯ ಶರ್ಮ, ಮೃದಂಗದಲ್ಲಿ ವಿದ್ವಾನ್ ಶ್ರೀ ಜಿ. ಎಸ್. ನಾಗರಾಜ್, ಕೊಳಲಿನಲ್ಲಿ ವಿದ್ವಾನ್ ಶ್ರೀ ಸ್ಕಂದ ಕುಮಾರ್ ಹಾಗೂ ವಯೋಲಿನ್‌ನಲ್ಲಿ ವಿದ್ವಾನ್ ಶ್ರೀ ಅರ್ಜುನ್ ಎಂ. ದಿನ್ ಅವರು ಸಹಕರಿಸಲಿದ್ದಾರೆ.ಭರತನಾಟ್ಯದ ಸಾಂಪ್ರದಾಯಿಕ ಸೊಬಗನ್ನು ಅನಾವರಣಗೊಳಿಸುವ ಈ ಶುಭ ಸಮಾರಂಭಕ್ಕೆ ಕಲಾಭಿಮಾನಿಗಳು ಆಗಮಿಸಿ ಕು. ಸ್ಫೂರ್ತಿ ಆರ್. ಎಸ್. ಅವರನ್ನು ಆಶೀರ್ವದಿಸುವಂತೆ ನಾಟ್ಯ ತರಂಗ ನೃತ್ಯಾಲಯದ ಸಂಸ್ಥಾಪಕಿ ಹಾಗೂ ನಿರ್ದೇಶಕಿ ವಿದುಷಿ ಶ್ರೀಮತಿ ವೀಣಾ ಗಂಗಾಧರ್ ಅವರು ವಿನಂತಿಸಿದ್ದಾರೆ.



ಲೇಖಕರು
ವಿಶ್ವಾಸ್ .ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

# 80ನೇ ಸ್ವಾತಂತ್ರ್ಯೋತ್ಸವ: ಸ್ವಾತಂತ್ರ್ಯದ ಅಮೃತಯಾನ ಮತ್ತು ನಮ್ಮ ಹೊಣೆಗಾರಿಕೆ

## ನಮ್ಮ ಒಗ್ಗಟ್ಟು, ಪ್ರಾಮಾಣಿಕತೆ ,ಜವಾಬ್ದಾರಿಯುತ ನಾಗರಿಕತ್ವವೇ ಭಾರತ

ಭಾರತದ ಇತಿಹಾಸದಲ್ಲಿ ಆಗಸ್ಟ್ 15ರ ದಿನಕ್ಕೆ ವಿಶೇಷವಾದ ಸ್ಥಾನವಿದೆ. 1947ರ ಆಗಸ್ಟ್ 15ರಂದು ಭಾರತವು ಬ್ರಿಟಿಷರ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದಿತು. 2026ರಲ್ಲಿ ನಾವು 80ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸುತ್ತಿದ್ದೇವೆ. ಇದು ಕೇವಲ ಸಂಭ್ರಮದ ದಿನವಲ್ಲ. ಎಂಟು ದಶಕಗಳ ಸ್ವಾತಂತ್ರ್ಯಯಾನದ ಸಾಧನೆಗಳನ್ನು ಸ್ಮರಿಸುವ, ಆತ್ಮಾವಲೋಕನ ಮಾಡುವ ಹಾಗೂ ಭವಿಷ್ಯದ ಭಾರತವನ್ನು ಕಟ್ಟುವ ಸಂಕಲ್ಪ ಮಾಡುವ ಮಹತ್ವದ ದಿನವಾಗಿದೆ.

ಸ್ವಾತಂತ್ರ್ಯಕ್ಕಾಗಿ ಅನೇಕ ಮಹನೀಯರು ತಮ್ಮ ಬದುಕನ್ನೇ ತ್ಯಾಗ ಮಾಡಿದರು. ಮಹಾತ್ಮ ಗಾಂಧೀಜಿ, ನೇತಾಜಿ ಸುಭಾಷ್ ಚಂದ್ರ ಬೋಸ್, ಭಗತ್ ಸಿಂಗ್, ಸರ್ದಾರ್ ವಲ್ಲಭಭಾಯಿ ಪಟೇಲ್, ಬಾಲ ಗಂಗಾಧರ ತಿಲಕ್ ಸೇರಿದಂತೆ ಅಸಂಖ್ಯಾತ ಹೋರಾಟಗಾರರ ತ್ಯಾಗ, ಬಲಿದಾನ ಮತ್ತು ಹೋರಾಟದ ಫಲವೇ ನಮ್ಮ ಸ್ವಾತಂತ್ರ್ಯ. ಅವರ ಕನಸು ಕೇವಲ ಬ್ರಿಟಿಷರಿಂದ ಮುಕ್ತವಾದ ಭಾರತವಲ್ಲ. ಸಮಾನತೆ, ನ್ಯಾಯ, ಶಾಂತಿ ಮತ್ತು ಮಾನವೀಯ ಮೌಲ್ಯಗಳನ್ನು ಹೊಂದಿದ ಭಾರತವಾಗಿತ್ತು. ಸ್ವಾತಂತ್ರ್ಯ ಪಡೆದಾಗ ಭಾರತವು ಅನೇಕ ಸವಾಲುಗಳನ್ನು ಎದುರಿಸುತ್ತಿತ್ತು. ಬಡತನ, ಅನಕ್ಷರತೆ, ನಿರುದ್ಯೋಗ, ಆಹಾರದ ಕೊರತೆ ಹಾಗೂ ಮೂಲಸೌಕರ್ಯಗಳ ಅಭಾವ ದೇಶದ ಮುಂದಿದ್ದವು. ಆದರೆ ಕಳೆದ ಎಂಟು ದಶಕಗಳಲ್ಲಿ ಭಾರತ ವಿಜ್ಞಾನ, ತಂತ್ರಜ್ಞಾನ, ಕೃಷಿ, ಶಿಕ್ಷಣ, ಕೈಗಾರಿಕೆ, ಬಾಹ್ಯಾಕಾಶ, ಆರೋಗ್ಯ, ರಕ್ಷಣಾ ಕ್ಷೇತ್ರ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಗಮನಾರ್ಹ ಪ್ರಗತಿ ಸಾಧಿಸಿದೆ. ಇಂದು ಭಾರತ ವಿಶ್ವದ ಪ್ರಮುಖ ರಾಷ್ಟ್ರಗಳ ಸಾಲಿನಲ್ಲಿ ಗುರುತಿಸಿಕೊಂಡಿರುವುದು ಪ್ರತಿಯೊಬ್ಬ ಭಾರತೀಯನಿಗೂ ಹೆಮ್ಮೆಯ ಸಂಗತಿ.ಆದರೆ ಸ್ವಾತಂತ್ರ್ಯದ ನಿಜವಾದ ಅರ್ಥ ಕೇವಲ ಧ್ವಜಾರೋಹಣ, ಸಿಹಿ ಹಂಚಿಕೆ ಮತ್ತು ದೇಶಭಕ್ತಿ ಗೀತೆಗಳಿಗೆ ಸೀಮಿತವಾಗಬಾರದು. ಭ್ರಷ್ಟಾಚಾರ, ಅಸಮಾನತೆ, ಜಾತಿ-ಧರ್ಮದ ದ್ವೇಷ, ಮಹಿಳೆಯರ ಮೇಲಿನ ದೌರ್ಜನ್ಯ, ಪರಿಸರ ನಾಶ, ನಿರುದ್ಯೋಗ ಹಾಗೂ ಸಾಮಾಜಿಕ ಅನ್ಯಾಯದಂತಹ ಸಮಸ್ಯೆಗಳಿಂದಲೂ ನಾವು ಮುಕ್ತರಾಗಬೇಕಿದೆ. ಸಂವಿಧಾನ ನಮಗೆ ನೀಡಿರುವ ಸ್ವಾತಂತ್ರ್ಯ ಮತ್ತು ಹಕ್ಕುಗಳ ಜೊತೆಗೆ ಕರ್ತವ್ಯಗಳನ್ನೂ ನೆನಪಿಸಿಕೊಳ್ಳಬೇಕು.ಇಂದಿನ ಯುವಜನತೆ ದೇಶದ ಭವಿಷ್ಯದ ಶಕ್ತಿ. ಉತ್ತಮ ಶಿಕ್ಷಣ, ಕೌಶಲ್ಯ, ಶಿಸ್ತು, ಸಾಮಾಜಿಕ ಜವಾಬ್ದಾರಿ ಮತ್ತು ದೇಶಪ್ರೇಮದೊಂದಿಗೆ ಯುವಕರು ಮುನ್ನಡೆದರೆ ಭಾರತ ಇನ್ನಷ್ಟು ಬಲಿಷ್ಠವಾಗಲಿದೆ. ಪ್ರತಿಯೊಬ್ಬ ನಾಗರಿಕನು ತನ್ನ ಕೆಲಸವನ್ನು ಪ್ರಾಮಾಣಿಕವಾಗಿ ನಿರ್ವಹಿಸುವುದೇ ದೇಶಸೇವೆಯ ಒಂದು ರೂಪ. ಪರಿಸರ ಸಂರಕ್ಷಣೆ, ಸಾರ್ವಜನಿಕ ಆಸ್ತಿಯ ರಕ್ಷಣೆ, ಮತದಾನದ ಜವಾಬ್ದಾರಿ, ಕಾನೂನು ಪಾಲನೆ ಮತ್ತು ಇತರರ ಹಕ್ಕುಗಳಿಗೆ ಗೌರವ ನೀಡುವುದು ನಮ್ಮ ಕರ್ತವ್ಯ.80ನೇ ಸ್ವಾತಂತ್ರ್ಯೋತ್ಸವವು ಹಿಂದಿನ ತ್ಯಾಗಗಳನ್ನು ಸ್ಮರಿಸುವುದರ ಜೊತೆಗೆ, ಮುಂದಿನ ಪೀಳಿಗೆಗೆ ಉತ್ತಮ ಭಾರತವನ್ನು ನೀಡುವ ಸಂಕಲ್ಪದ ದಿನವಾಗಲಿ.

''ನನ್ನ ದೇಶಕ್ಕಾಗಿ ನಾನು ಏನು ಮಾಡಬಹುದು?'' ಎಂಬ ಪ್ರಶ್ನೆಯನ್ನು ಪ್ರತಿಯೊಬ್ಬರೂ ತಮ್ಮೊಳಗೆ ಕೇಳಿಕೊಳ್ಳಬೇಕು. ನಮ್ಮ ಒಗ್ಗಟ್ಟು, ಪ್ರಾಮಾಣಿಕತೆ ಮತ್ತು ಜವಾಬ್ದಾರಿಯುತ ನಾಗರಿಕತ್ವವೇ ಭಾರತದ ಭವಿಷ್ಯದ ಶಕ್ತಿಯಾಗಲಿ.ಸ್ವಾತಂತ್ರ್ಯದ ಎಂಟು ದಶಕಗಳ ಪಯಣವನ್ನು ಹೆಮ್ಮೆಯಿಂದ ಸ್ಮರಿಸುತ್ತಾ, ಶ್ರೇಷ್ಠ, ಸಮೃದ್ಧ, ಸಮಾನತೆಯ ಮತ್ತು ಮಾನವೀಯ ಮೌಲ್ಯಗಳ ಭಾರತ ನಿರ್ಮಾಣಕ್ಕೆ ನಾವು ಎಲ್ಲರೂ ಕೈಜೋಡಿಸೋಣ.

**ಜೈ ಹಿಂದ್! ಜೈ ಭಾರತ!**

# ಪ್ರತಿದಿನ ರಾತ್ರಿ ತಡವಾಗಿ ಊಟ ಮಾಡುತ್ತೀರಾ? ಹಾಗಾದ್ರೆ ಈ ಆರೋಗ್ಯ ಸಮಸ್ಯೆ ಬರಬಹುದು ಹುಷಾರ್

ಕೆಲಸದ ಒತ್ತಡ, ಸುದೀರ್ಘ ಪ್ರಯಾಣ ಮತ್ತು ಬದಲಾಗುತ್ತಿರುವ ದಿನಚರಿಯಿಂದಾಗಿ ಪ್ರತಿನಿತ್ಯ ರಾತ್ರಿಯ ಊಟ ಹೆಚ್ಚಾಗಿ ತಡವಾಗುತ್ತದೆ. ಒಂದು ದಿನ ತಡವಾಗಿ ಊಟ ಮಾಡುವುದರಿಂದ ದೊಡ್ಡ ಸಮಸ್ಯೆ ಉಂಟಾಗದಿರಬಹುದು, ಆದರೆ ಇದನ್ನೆ ಪ್ರತಿದಿನ ಅಭ್ಯಾಸ ಮಾಡಿಕೊಂಡರೆ ನಿಮ್ಮ ಜೀರ್ಣಕ್ರಿಯೆ, ಶುಗರ ಲೆವಲ್ ಹಾಗೂ ನಿದ್ರೆಯ ಮೇಲೆ ಒತ್ತಡ ಉಂಟಾಗಬಹುದು ಎಂದು ತಜ್ಞರು ಹೇಳುತ್ತಾರೆ. ವೈದ್ಯರ ಪ್ರಕಾರ ನಾವೂ ಊಟ ಮಾಡುವ ಸಮಯ ಬಹಳ ಮುಖ್ಯ. ಏಕೆಂದರೆ ಊಟ ಮಾಡಿದ ತಕ್ಷಣ ಮಲಗಿದರೆ ಆಹಾರ ಜೀರ್ಣವಾಗಿ ಹೊಟ್ಟೆ ಖಾಲಿಯಾಗಲು ದೇಹಕ್ಕೆ ಪೂರ್ಣ ಸಮಯ ದೊರೆಯುವುದಿಲ್ಲ. ಕೆಲಸದ ಒತ್ತಡದ ನಡುವೆ ಪ್ರತಿದಿನ ತಡವಾಗಿ ಊಟ ಮಾಡುವುದು ದೊಡ್ಡ ವಿಷಯವಲ್ಲ ಅನಿಸಬಹುದು. ಆದರೆ ನಾವು ತಡವಾಗಿ ಊಟ ಮಾಡುವುದು ನಮ್ಮ ಜೀರ್ಣಕ್ರಿಯೆ ಮೇಲಷ್ಟೆ ಅಲ್ಲ ನಮ್ಮ ದೇಹದ ಹಲವು ಅಂಗಗಳ ಮೇಲೆಯೂ ಪ್ರಭಾವ ಬೀರುತ್ತದೆ. ನಾವು ಸೇವಿಸುವ ಆಹಾರಕ್ಕೆ ತಕ್ಕಂತೆ ನಮ್ಮ ದೇಹದ ಪ್ರತಿಕ್ರಿಯೆಯೂ ಬದಲಾಗುತ್ತದೆ.

ಬೆಳಗಿನ ಸಮಯಕ್ಕೆ ಹೋಲಿಸಿದರೆ ರಾತ್ರಿ ಸಮಯ ದೇಹದಲ್ಲಿ ಇನ್ಸುಲಿನ್ ಪ್ರಮಾಣ ಕಡಿಮೆ ಇರುತ್ತದೆ. ಮಲಗುವ ಸಮಯದಲ್ಲಿ ಊಟ ಮಾಡುವುದರಿಂದ ರಕ್ತದಲ್ಲಿನ ಸಕ್ಕರೆ ಪ್ರಮಾಣ ಹೆಚ್ಚಾಗುತ್ತದೆ. ಇದು ಪ್ರತಿನಿತ್ಯ ಅಭ್ಯಾಸವಾದರೆ ಪ್ರಿ-ಡಯಾಬಿಟಿಸ್, ಮಧುಮೇಹ, ಅತಿಯಾದ ತೂಕ, ಇನ್ಸುಲಿನ್ ಮುಂತಾದ ಕಾಯಿಲೆಗಳು ಪ್ರಾರಂಭವಾಗುತ್ತವೆ. ರಾತ್ರಿ ತಡವಾಗಿ ಊಟ ಮಾಡುವುದರಿಂದ ದಿನ ನಿತ್ಯ ನಾವು ಹಲವು ಸಮಸ್ಯೆಗಳನ್ನು ಎದುರಿಸುತ್ತೇವೆ.



ಕಲಾ ಸಾಹಿತ್ಯ
ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

# ರಾಷ್ಟ್ರದ ಮಹನೀಯರ ಸಾಧನೆಗಳು ಹಾಗೂ ಅವರುಗಳ ಆದರ್ಶಗಳನ್ನು ಬಿಂಬಿಸುವ ಪಕ್ಷಿ ನೋಟ

**ಗುಡಿ-ಚರ್ಚು-ಮಸೀದಿ- ಗುರುದ್ವಾರ-ಜೈನ-ಬೌದ್ಧ- ಪಾರ್ಸಿ ಇನ್ನೂ ಅನೇಕ ಧರ್ಮದವರು ತಮ್ಮಗಳ ಧರ್ಮದ ದೇವಾಲಯಗಳನ್ನು ಕಟ್ಟಿಕೊಂಡು ಆಚರಣೆ ಮಾಡುತ್ತಿರುವುದು ಅನಾದಿಕಾಲದಿಂದಲೂ ಚಾಲ್ತಿಯಲ್ಲಿದೆ. ಪ್ರಸ್ತುತ ಮಾನವ ತಮ್ಮ ಮನಸ್ಸುಗಳನ್ನು ಬದಲಾಯಿಸಿಕೊಳ್ಳುವ ಹಾಗೂ ಎಲ್ಲರೂ ಆತ್ಮಾವಲೋಕನವನ್ನು ಮಾಡಿಕೊಳ್ಳುವ ಕಾಲಬಂದಿದೆ. ಯಾವುದು ಸರಿ ಯಾವುದು ತಪ್ಪು ಎಂಬ ಬಗ್ಗೆ ಅವರವರುಗಳೇ ನಿರ್ಧಾರ ತೆಗೆದುಕೊಳ್ಳುವ ಈ ಕಾಲಘಟ್ಟದಲ್ಲಿ ಎಲ್ಲರಿಗೂ ಸತ್ಯದ ದರ್ಶನವಾಗಿದೆ. ಹಾಗಾದರೆ ತಡಮಾಡದೇ ಸತ್ಯವಂತರ ಮಹಾಪುರುಷರ ದರ್ಶನ ಹಾಗೂ ಅವರುಗಳ ಆದರ್ಶಗಳು,ಸಾಧನೆಗಳು ಬಿಂಬಿಸುವ ಪಕ್ಷಿನೋಟ ಇಂದಿನ ಮಾನವೀಯ ಮೌಲ್ಯಗಳು ಕುಸಿಯುತ್ತಿರುವ ಈ ಕಾಲಘಟ್ಟದಲ್ಲಿ ಅಗತ್ಯ ಎನಿಸುತ್ತದೆ. ಆದ್ದರಿಂದ ಅವರುಗಳನ್ನು ಬಿಂಬಿಸುವ ಸಾಕ್ಷಿ ಚಿತ್ರ ಜೊತೆಗೆ ಅವರುಗಳ ಸಾಧನೆಗಳು ಹಾಗೂ ಆದರ್ಶಗಳು ಸಂಗ್ರಹ ಉಳ್ಳಜ್ಞಾನ ದೇವಾಲಯಗಳನ್ನು ಪ್ರತಿವಾರ್ಡನಲ್ಲಿ ತೆರೆಯುವುದು ಸರ್ವರ ದೃಷ್ಟಿಯಿಂದಲೂ ಒಳ್ಳೆಯದು.**

ಭಾರತದ ಇತಿಹಾಸ, ಕಲೆ-ಸಾಹಿತ್ಯ ,ಸಂಸ್ಕೃತಿ, ವಿಜ್ಞಾನ,ಉದ್ದಿಮೆಗಳನ್ನು ಬೆಳೆಸಿ ವೃದ್ಧಿಸಿದ ಅನೇಕ ಮಹಾಪುರುಷರುಗಳಿಗೆ ಈ ಪುಣ್ಯಭೂಮಿ ಜನ್ಮ ನೀಡಿದೆ.ಬದುಕಿನ ಎಲ್ಲಾ ಕ್ಷೇತ್ರಗಳಲ್ಲಿ ಅತ್ಯುನ್ನತ ಪ್ರಗತಿಯನ್ನು ಸಾಧಿಸಿ ಜಾಗತಿಕ ಮಟ್ಟದಲ್ಲಿ ಮಾತೃಭೂಮಿಗೆ ಕೀರ್ತಿ ಗಳಿಸಿಕೊಟ್ಟ ಈ ಕೆಳಕಂಡ ಮಹನೀಯರುಗಳು ಪ್ರಾತಃಸ್ಮರಣೀಯರಾಗಿದ್ದಾರೆ. ಅನಾದಿಕಾಲದಿಂದಲೂ ರಾಷ್ಟ್ರದಲ್ಲಿ ಜಾತೀಯತೆ, ಗೊಡ್ಡು ಸಂಪ್ರದಾಯಗಳು, ಕಟ್ಟುಪಾಡುಗಳು,ಆಚಾರ ವಿಚಾರಗಳು,ಅಸ್ಪೃಶ್ಯ ಗಳು,ಧರ್ಮಾಂಧತೆ, ಮತಾಂಧತೆ,ಅನಿಷ್ಟ ಪದ್ಧತಿಗಳು, ಮೂಡನಂಬಿಕೆಗಳು ಜೀವಂತವಾಗಿವೆ. ಇವುಗಳನ್ನು ಶಾಶ್ವತವಾಗಿ ನಿರ್ಮೂಲನೆ ಮಾಡಲು ಕಷ್ಟಸಾಧ್ಯವಾಗುತ್ತದೆ.

ಕೊನೇಪಕ್ಷ ಇಲ್ಲಿಂದಲ್ಲಾದರೂ ಮನಸ್ಸು ಪರಿವರ್ತನೆ ಮಾಡಿಕೊಂಡು ಬದಲಾಯಿಸಿಕೊಳ್ಳಲು ಅನುಕೂಲವಾಗಬಹುದು ಎಂಬುದು ಎಲ್ಲಾ ಸಜ್ಜನರ ಚಿಂತನೆ. **ಉದಾಹರಣೆಗೆ:** ಆಯಾಯ ಕ್ಷೇತ್ರಗಳಲ್ಲಿ ಅತ್ಯಂತ ಪರಿಣತಿ ಪಡೆದು ಸ್ಥಾನಮಾನಗಳಿಸಿಕೊಂಡ ಈ ಕೆಳಕಂಡ ಮಹನೀಯರುಗಳು ಕೆಲವು **ಇತಿಹಾಸ ಪ್ರಸಿದ್ಧರು:** ಚಂದ್ರಗುಪ್ತ ಮೌರ್ಯ, ಅಶೋಕ,ಹರ್ಷವರ್ಧನ, ಇಮ್ಮಡಿ ಪುಲಿಕೇಶಿ, ವಿಷ್ಣುವರ್ಧನ ,ಅಕ್ಬರ್, ಛತ್ರಪತಿ ಶಿವಾಜಿ,ರಾಣಾ ಪ್ರತಾಪ್ ಸಿಂಗ್, ಕೃಷ್ಣದೇವರಾಯ, ಕೆಂಪೇಗೌಡ,ನಾಲ್ವಡಿ ಕೃಷ್ಣರಾಜ ಒಡೆಯರ್ ಇನ್ನೂ ಮುಂತಾದವರು. **ಕೆಲವು ಶ್ರೇಷ್ಠ ಜ್ಞಾನಜ್ಯೋತಿ ದಾಸೋಹ ಮಠಾಧಿಪತಿಗಳು ಹಾಗೂ ಧರ್ಮಾಧಿಕಾರಿಗಳು:** ಡಾ. ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳು, ಡಾ. ಬಾಲಗಂಗಾಧರನಾಥ ಸ್ವಾಮಿಗಳು, ಶ್ರೀ ಶ್ರೀ ಸಿದ್ದೇಶ್ವರ ಸ್ವಾಮಿಗಳು, ಡಾ .ಶ್ರೀ ಶಿವಮೂರ್ತಿ ಮುರುಘಾ ಶರಣರು, ಡಾ. ಶ್ರೀ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಡಾ .ವೀರೇಂದ್ರ ಹೆಗ್ಗಡೆಯವರು,ಡಾ. ಸಾಯಿಬಾಬಾರವರು ಇನ್ನೂ ಮುಂತಾದವರು. ಕೆಲವು **ಸ್ವಾತಂತ್ರ್ಯ ಹೋರಾಟಗಾರರು:** ಝಾನ್ಸಿ ರಾಣಿ ಲಕ್ಷ್ಮೀಬಾಯಿ, ಕಿತ್ತೂರಾಣಿ ಚೆನ್ನಮ್ಮ ,ಕೆಳದಿ ಚೆನ್ನಮ್ಮ, ರಾಣಿ ಅಬ್ಬಕ್ಕದೇವಿ, ತಾಂತ್ಯಾಟೋಪಿ,ಸಂಗೊಳ್ಳಿ ರಾಯಣ್ಣ,ಮದಕರಿ ನಾಯಕ, ಲಾಲಾ ಲಜಪತ್ ರಾಯ್, ಬಾಲಗಂಗಾಧರ ತಿಲಕ್, ಪಂಡಿತ ಮದನ ಮೋಹನ ಮಾಳವೀಯ,ನೇತಾಜಿ ಸುಭಾಷ್ ಚಂದ್ರ ಬೋಸ್, ಭಗತ್ ಸಿಂಗ್, ಚಂದ್ರಶೇಖರ್ ಅಜಾದ್, ಸುಖದೇವ್, ರಾಜಗುರು, ವೀರ್ ಸವರ್ಕರ್ ಇನ್ನು ಮುಂತಾದವರು.ಕೆಲವು **ಜ್ಞಾನ ದೀಪಗಳು ಮತ್ತು ಸಮಾಜ ಸುಧಾರಕರು:** ವರ್ಧಮಾನ ಮಹಾವೀರ, ಭಗವಾನ್ ಬುದ್ಧ, ಗುರುನಾನಕ್, ಶಂಕರಾಚಾರ್ಯ, ಬಸವಣ್ಣ ,ಸರ್ವಜ್ಞ, ಪುರಂದರದಾಸರು, ಕನಕದಾಸರು, ರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರು, ಶಾರದಾದೇವಿ,ಸ್ವಾಮಿ ದಯಾನಂದ ಸರಸ್ವತಿ, ರಮಣ ಮಹರ್ಷಿ, ರಾಜಾರಾಮ್ ಮೋಹನ್ ರಾಯ್,ಆಚಾರ್ಯ ವಿನೋಬಾ ಭಾವೆ,ಬಾಬಾ ಆಮ್ಟೆ ಇನ್ನು ಮುಂತಾದವರು.

**ಕೆಲವು ರಾಷ್ಟ್ರ ಜ್ಯೋತಿಗಳು ಮತ್ತು ರಾಜಕೀಯ ನಾಯಕರುಗಳು:** ಗೋಪಾಲಕೃಷ್ಣ ಗೋಖಲೆ, ಮಹಾತ್ಮ ಗಾಂಧೀಜಿ, ಖಾನ್ ಅಬ್ದುಲ್ ಗಫಾರ್ ಖಾನ್,ಅನಿಬೆಸೆಂಟ್, ಮೌಲಾನಾ ಅಬ್ದುಲ್ ಕಲಾಂ ಅಜಾದ್, ನೆಹರು, ಡಾ :ರಾಜೇಂದ್ರ ಪ್ರಸಾದ್ ,ಸರ್ದಾರ್ ವಲ್ಲಭಾಯ್ ಪಟೇಲ್, ಡಾ: ಬಿಆರ್ ಅಂಬೇಡ್ಕರ್, ಸಿ. ರಾಜಗೋಪಾಲಾಚಾರಿ, ಜಯಪ್ರಕಾಶ್ ನಾರಾಯಣ್, ರಾಮ್ ಮನೋಹರ ಲೋಹಿಯಾ, ಶ್ಯಾಮಪ್ರಸಾದ ಮುಖರ್ಜಿ, ಪಂಡಿತ್ ದೀನದಯಾಳ್ ಉಪಾಧ್ಯಾಯ, ಕೆಎಂ ಮುನ್ಸಿ ,ಡಾ. ಜಾಕಿರ್ ಹುಸೇನ್, ಡಾ. ಎಸ್ ರಾಧಾಕೃಷ್ಣನ್ ,ಲಾಲ್ ಬಹದ್ದೂರ್ ಶಾಸ್ತ್ರಿ ಇಂದಿರಾಗಾಂಧಿ, ಅಟಲ್ ಬಿಹಾರಿ ವಾಜಪೇಯಿ, ಡಾ. ಎಪಿಜೆ ಅಬ್ದುಲ್ ಕಲಾಂ, ಕೆಂಗಲ್ ಹನುಮಂತಯ್ಯ ಇನ್ನು ಮುಂತಾದವರು.

**ಸಾಹಿತ್ಯಲೋಕದ ಮೇರು ಶಿಖರಗಳು:** ವಾಲ್ಮೀಕಿ ,ವ್ಯಾಸ, ಕಾಳಿದಾಸ ,ಪಂಪ ,ರನ್ನ, ಕುಮಾರವ್ಯಾಸ ,ಬಂಕಿಮ ಚಂದ್ರ ಚಟರ್ಜಿ, ರವೀಂದ್ರನಾಥ್ ಟಾಗೋರ್ ,ಸರೋಜಿನಿ ನಾಯ್ಡು ,ಆರ್ ಕೆ ನಾರಾಯಣ್ ,ಕುವೆಂಪು, ಬೇಂದ್ರೆ, ಕಾರಂತ್ ,ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ಗೋಕಾಕ್, ಅನಂತಮೂರ್ತಿ, ಕರ್ನಾಡ್ ,ಕಂಬಾರ ಇನ್ನು ಮುಂತಾದವರು.

**ಕೆಲವು ಕಲಾಲೋಕದ ಮಿನುಗು ತಾರೆಗಳು:** ರಾಜಾ ರವಿವರ್ಮ, ತ್ಯಾಗರಾಜರು, ಪಂಡಿತ್ ರವಿಶಂಕರ್, ಎಂ ಎಸ್ ಸುಬ್ಬಲಕ್ಷ್ಮಿ ,ಲತಾ ಮಂಗೇಶ್ವರ್ ,ಪಂಡಿತ್ ಭೀಮಸೇನ ಜೋಶಿ, ಪಂಡಿತ್ ಮಲ್ಲಿಕಾರ್ಜುನ ಮನಸೂರ, ಗಂಗೂಬಾಯಿ ಹಾನಗಲ್, ಪಂಚಾಕ್ಷರಿ ಗವಾಯಿ ,ಪಿ. ಕಾಳಿಂಗರಾವ್, ಮೈಸೂರು ಅನಂತಸ್ವಾಮಿ, ಸಿ. ಅಶ್ವಥ್, ಗುಬ್ಬಿ ವೀರಣ್ಣ, ಡಾ .ರಾಜಕುಮಾರ್, ವಿಷ್ಣುವರ್ಧನ್, ಅಂಬರೀಶ್, ಶಂಕರ್ ನಾಗ್, ಕಮಲಬಾಯಿ ಚಟ್ಟೋಪಾಧ್ಯಾಯ ಇನ್ನು ಮುಂತಾದವರು.

**ಕೆಲವು ವಿಜ್ಞಾನ ಕ್ಷೇತ್ರದ ದ್ರುವ ನಕ್ಷತ್ರಗಳು:** ಆರ್ಯಭಟ, ಜಗದೀಶ್ ಚಂದ್ರ ಬೋಸ್, ಶ್ರೀನಿವಾಸ್ ರಾಮಾನುಜನ್, ಸರ್ ಸಿ ವಿ ರಾಮನ್, ಡಾ: ಹೋಮಿ ಜಹಂಗೀರ್ ಭಾಬಾ, ಡಾ. ಸತ್ಯೇಂದ್ರನಾಥ ಬೋಸ್, ಡಾ . ವಿಕ್ರಮ್ ಸಾರಾಭಾಯ್, ಸುಬ್ರಹ್ಮಣ್ಯ ಚಂದ್ರಶೇಖರ್, ಡಾ. ಬಿಪಿ ಪಾಲ್, ಡಾ. ಎಂ ಎಸ್ ಸ್ವಾಮಿನಾಥನ್, ಡಾ. ರಾಜಾರಾಮಣ್ಣ ಪ್ರೊ.ಯು ಆರ್ ರಾವ್, ಪ್ರೊ:.ಸಿಎನ್ಆರ್ ರಾವ್, ಶಾಂತಿ ಸ್ವರೂಪ್ ಬಟ್ನಾಗರ್ ,ಸತೀಶ್ ಧವನ್ ಇನ್ನೂ ಮುಂತಾದವರು.

**ಕೆಲವು ಸಾಹಸಿ ಉದ್ಯಮಿಗಳು:** ರತನ್ ಟಾಟಾ, ಜಮನ್ ಲಾಲ್ ಬಜಾಜ್, ಕಿರ್ಲೋಸ್ಕರ್ ,ಅಂಬಾನಿ, ಆದಿ ಗೋದ್ರೆಜ್, ಒಬೆರಾಯ್, ಬಿರ್ಲಾ, ಎನ್ ಆರ್ ನಾರಾಯಣಮೂರ್ತಿ, ಅಜೀಮ್ ಪ್ರೇಮ್ಜಿ, ಕಿರಣ್ ಮುಜುಂದಾರ್ ಇನ್ನೂ ಮುಂತಾದವರು.

**ಕೆಲವು ಕ್ರೀಡಾ ಪ್ರತಿಭೆಗಳು:** ಧ್ಯಾನ್ ಚಂದ್, ಮಿಲ್ಕಾ ಸಿಂಗ್ ,ಸುನಿಲ್ ಗವಾಸ್ಕರ್ ,ಕಪಿಲ್ ದೇವ್, ಪ್ರಕಾಶ್ ಪಡುಕೋಣೆ ,ವಿಶ್ವನಾಥ್ ಆನಂದ್, ಪಿಟಿ ಉಷಾ, ಸಚಿನ್ ಇನ್ನು ಮುಂತಾದವರು. **ಕೆಲವು ಇನ್ನಿತರ ಸುಪ್ರಸಿದ್ಧರು:** ಮದರ್ ತೆರೇಸಾ, ವಿಶ್ವೇಶ್ವರಯ್ಯ ,ಸರ್ ಮಿರ್ಜಾ ಇಸ್ಮಾಯಿಲ್, ಜನರಲ್ ಕೆ ಎಂ ಕಾರ್ಯಪ್ಪ ,ಜನರಲ್ ಮಾಣಿಕ್ ಷಾ, ದಾದಾಸಾಹೇಬ್ ಫಾಲ್ಕೆ, ಡಾ .ಎಚ್ ನರಸಿಂಹಯ್ಯ, ಸಾಲುಮರದ ತಿಮ್ಮಕ್ಕ ಇನ್ನು ಮುಂತಾದವರು. ಇಂದಿನ ಯಾಂತ್ರಿಕ ಬದುಕು, ಜಾಗತೀಕರಣ, ಸಂಪತ್ತಿನ ಶೇಖರಣೆ, ಭೋಗ ವಿಲಾಸ, ಸ್ವಾರ್ಥ ಜೀವನದಿಂದಾಗಿ ಜನರ ನೈತಿಕ ಮಟ್ಟ ಕುಸಿಯುತ್ತಿದೆ. ಇಂದಿನ ಯುವ ಪೀಳಿಗೆಗೆ ಸನ್ಮಾರ್ಗ ದರ್ಶನ ಮಾಡಬಲ್ಲ ಯೋಗ್ಯ ವ್ಯಕ್ತಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಮಹಾನ್ ವ್ಯಕ್ತಿಗಳ ಜೀವನ ವಿಚಾರವನ್ನು ತಿಳಿಯುವುದರಿಂದ ಯುವಕ- ಯುವತಿಯರ,ವಿದ್ಯಾರ್ಥಿಗಳ ಗುಣಶೀಲಗಳು ವಿಕಾಸವಾಗುತ್ತವೆ. ಯುವಕರು ಆದರ್ಶದ ಹಾದಿ ಕಾಣದೇ ಅಂಧಕಾರದಲ್ಲಿ ತಡವರಿಸುತ್ತಿದ್ದಾರೆ. ಹಿರಿಯರೆನಿಸಿದವರು ರಾಜಕೀಯ ನಾಯಕರುಗಳ ಸ್ವಾರ್ಥ, ಸಂಕುಚಿತ ಭಾವನೆ, ಅಧಿಕಾರ ಲಾಲಸೆ,ಭ್ರಷ್ಟಾಚಾರ,ದ್ವೇಷ, ನಯವಂಚನೆ ಇವುಗಳಲ್ಲಿ ಮುಳುಗಿ ಕಿರಿಯರಿಗೆ ಸನ್ಮಾರ್ಗ ತೋರಲು ಅನರ್ಹರೆನಿಸಿದ್ದಾರೆ. ಸಮಾಜಘಾತಕ ಶಕ್ತಿಗಳಿಂದಾಗಿ ಜೀವನ ಮೌಲ್ಯಗಳು ಕುಸಿಯುತ್ತಿವೆ.

ಇಂತಹ ಹತಾಶ ಸನ್ನಿವೇಶದಲ್ಲಿ ನಮ್ಮ ನೆಲದ ಮಹಾನ್ ವ್ಯಕ್ತಿಗಳ ಸಾಧನೆಯ ಪರಿಚಯ ಅವರವರ ಆದರ್ಶಗಳು ಯುವಜನರಿಗೆ ಅಗತ್ಯವೆನಿಸುತ್ತದೆ.

ತಮ್ಮ ಪ್ರತಿಭಾ ಜ್ಯೋತಿಯನ್ನು ಎಲ್ಲಾ ದಿಕ್ಕುಗಳಲ್ಲಿ ಪ್ರಸರಿಸಿದ ಚೈತನ್ಯ ಪುರುಷರ ಸಾಧನೆ, ಜೀವನರೀತಿ,ಮೌಲ್ಯಗಳು ಯುವ ಪೀಳಿಗೆಗೆ ಉತ್ತಮ ಆದರ್ಶಗಳನ್ನು ನೀಡುವ ಸಾಮರ್ಥ್ಯ ಪಡೆದಿವೆ. ಮಹಾನ್ ವ್ಯಕ್ತಿಗಳ ಜೀವನ ವಿಚಾರವನ್ನು ತಿಳಿಯುವುದರಿಂದ ಯುವಕ- ಯುವತಿಯರ,ವಿದ್ಯಾರ್ಥಿಗಳ ಗುಣಶೀಲಗಳು ವಿಕಾಸವಾಗುತ್ತವೆ. ಆದ್ದರಿಂದ ಇಂತಹ ಮಹಾನ್ ಪುರುಷರ ಭಾವಚಿತ್ರ ಇರುವ ಅವರುಗಳ ಸಾಧನೆಗಳು ಹಾಗೂ ಆದರ್ಶಗಳನ್ನು ಬಿಂಬಿಸುವ ಜ್ಞಾನ ದೇವಾಲಯ ಇಂದಿನ ಕಾಲಘಟ್ಟಕ್ಕೆ ಅತ್ಯಗತ್ಯವಾಗಿದೆ, ಎಂಬುದು ಎಲ್ಲಾ ಸಜ್ಜನ ಜ್ಞಾನವಂತರ, ವಿದ್ಯಾವಂತರ ಹಾಗೂ ಹಿರಿಯರ ಅಭಿಪ್ರಾಯವಾಗಿದೆ.

